# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಆಗಸ್ಟ್ 24, 2021

ಸಂಪುಟ : 48 ಸಂಚಿಕೆ : 102 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಜಿಲ್ಲೆಯಲ್ಲಿ ಶಾಲೆಗಳಿಗೆ ಹುಮ್ಮಸ್ಸಿನಿಂದಲೇ ಆಗಮಿಸಿದ ವಿದ್ಯಾರ್ಥಿಗಳು - ಶಿಕ್ಷಕರು

ದಾವಣಗೆರೆ, ಆ.23- 9 ರಿಂದ ದ್ವಿತೀಯ ಪಿಯುಸಿ ವರೆಗಿನ ಭೌತಿಕ ತರಗತಿ ಗಳು ಸೋಮವಾರ ಆರಂಭಗೊಂಡ ಹಿನ್ನೆಲೆ ಯಲ್ಲಿ ಬರೋಬ್ಬರಿ ವರ್ಷದ ನಂತರ ಶಾಲೆ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕಲವರ ಕೇಳಿ ಬಂತು.

**ಮಕ್ಕಳಿಗೆ ಸಿಹಿ ನೀಡಿ ಸ್ವಾಗತ, ಮೊದಲ ದಿನವೇ ಉತ್ತಮ ಹಾಜರಾತಿ**

ವಿದ್ಯಾಗಮ ಹಾಗೂ ಆನ್‌ಲೈನ್ ತರ ಗತಿಗಳಲ್ಲಿಯೇ ಅಭ್ಯಾಸ ನಿರತರಾಗಿದ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಹುರುಪಿನಿಂದಲೇ ಶಾಲೆಗಳಿಗೆ ಆಗಮಿಸಿ ದ್ದರು. ಹಲವೆಡೆ ಮಕ್ಕಳಿಗೆ ಸಿಹಿ ನೀಡಿ ಸ್ವಾಗತಿಸಲಾಯಿತು. ಶಾಲೆ ಯಾವಾಗ ಆರಂಭವಾಗುವುದೋ ಎಂದು ಕಾಯುತ್ತಿದ್ದ ಪೋಷಕರು ನಿಟ್ಟುಸಿರು ಬಿಟ್ಟು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದ್ದರು.

ಇತ್ತ ಶಾಲೆಗಳಲ್ಲಿ ಕೋವಿಡ್ ಮಾರ್ಗ ಸೂಚಿಗಳನ್ನು ಪಾಲಿಸಿಯೇ ತರಗತಿಗಳನ್ನು ಆರಂಭಿಸಲಾಯಿತು. ಶಾಲೆ ಗಳ ಕೊಠಡಿಗಳು, ಗ್ರಂಥಾಲಯ ಹಾಗೂ ಆವರಣದಲ್ಲಿ ಸ್ಯಾನಿಟೈಸರ್ ಮಾಡಲಾಗಿತ್ತು.

ಮಕ್ಕಳನ್ನು ಥರ್ಮಲ್ ಸ್ಕ್ಯಾನಿಂಗ್ ಮಾಡಿ ತರಗತಿಗಳ ಒಳಗೆ ಕಳುಹಿಸಲಾ ಯಿತು. ಪಾಲಕರ ಅನುಮತಿ ಪತ್ರದೊಂದಿಗೆ ವಿದ್ಯಾರ್ಥಿಗಳು ಆಗಮಿಸಿದ್ದರು. ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1.30ರ ವರೆಗೆ ಮಾತ್ರ ತರಗತಿಗಳಿಗೆ ಅವಕಾಶವಿದ್ದರಿಂದ ಕುಡಿಯುವ ನೀರನ್ನು ಮಾತ್ರ ವಿದ್ಯಾರ್ಥಿಗಳು ತಂದಿದ್ದರು. ಪ್ರತಿ ಕೊಠಡಿಯಲ್ಲಿ 20 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು.

ಜಿಲ್ಲೆಯಲ್ಲಿ ಸುಮಾರು (3ನೇ ಪುಟಕ್ಕೆ)



### 26 ಜಿಲ್ಲೆಗಳಲ್ಲಿ ಶಾಲೆಗಳ ಪುನರಾರಂಭ

ಬೆಂಗಳೂರು, ಆ. 23- ಒಂದೂವರೆ ವರ್ಷದ ನಂತರ ರಾಜ್ಯದಲ್ಲಿ 9 ರಿಂದ 12ನೇ ತರಗತಿಗಳ ನೇರ ತರಗತಿಗಳು ಆರಂಭವಾಗಿದ್ದು, ವಿದ್ಯಾರ್ಥಿಗಳು ಲವಲವಿಕೆಯಿಂದ ಶಾಲಾ-ಕಾಲೇಜುಗಳಿಗೆ ಹಾಜರಾದರು.

ಕೋವಿಡ್ ಪಾಸಿಟಿವಿಟಿ ಶೇ.2ಕ್ಕಿಂತ ದರ ಹೆಚ್ಚಿರುವ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ 26 ಜಿಲ್ಲೆಗಳಲ್ಲಿ ಇಂದು ಬೆಳಗ್ಗೆಯಿಂದಲೇ ಭೌತಿಕ ತರಗತಿಗಳು ಶುರುವಾದವು.

ಎಲ್ಲ ಕಡೆ ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜತೆಗೆ, ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿ, ತರಗತಿಗಳೊಳಕ್ಕೆ ಬಿಡಲಾಯಿತು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಅಕ್ಕರೆಯಿಂದ ಬರ ಮಾಡಿಕೊಂಡರು. ಶಾಲಾ-ಕಾಲೇಜುಗಳು ರಂಗೋಲಿ, ತಳಿರು ತೋರಣಗಳಿಂದ ಕಂಗೊಳಿಸುತ್ತಿದ್ದವು.

ಬಹುತೇಕ ಕಡೆ ನೇರ ತರಗತಿಗಳ ಆರಂಭಕ್ಕೆ ಪೋಷಕರು ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ, ಸರಕಾರ ಮಾತ್ರ ಶೈಕ್ಷಣಿಕ ಚಟುವಟಿಕೆಗಳು ಹಳಿ ತಪ್ಪಬಾರದು ಎಂದು ಹೇಳಿದೆ.

ರಾಜ್ಯದ 26 ಜಿಲ್ಲೆಗಳಲ್ಲಿ 16,000ಕ್ಕೂ ಹೆಚ್ಚು ಪ್ರೌಢಶಾಲೆಗಳು ಹಾಗೂ 5,000ಕ್ಕೂ ಹೆಚ್ಚು ಪಿಯುಸಿ ಕಾಲೇಜುಗಳಿವೆ. ಈ ಸಂಸ್ಥೆಗಳಲ್ಲಿ 9 ರಿಂದ 12ನೇ ತರಗತಿಗಳಲ್ಲಿ 25 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈಗ ಇವರೆಲ್ಲರೂ ನೇರ ತರಗತಿಗಳಿಗೆ ಹಾಜರಾಗಿದ್ದಾರೆ.

ಒಂದೂವರೆ ವರ್ಷದ (2ನೇ ಪುಟಕ್ಕೆ)


# ಮೂರನೇ ಅಲೆ ತಪ್ಪದು

## ಕೊರೊನಾ ಲಸಿಕೆ ವೇಗ ಹೆಚ್ಚಿಸಲು ಕೇಂದ್ರ ಸಮಿತಿ ವರದಿ

ನವದೆಹಲಿ, ಆ. 23 - ಸೆಪ್ಟೆಂಬರ್ ಹಾಗೂ ಅಕ್ಟೋಬರ್ ಅವಧಿಯಲ್ಲಿ ಮೂರನೇ ಕೊರೊನಾ ಅಲೆ ತಪ್ಪುವುದಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯದ ಸಮಿತಿಯೊಂದು ತಿಳಿಸಿದ್ದು, ಲಸಿಕೆ ವೇಗವನ್ನು ಹೆಚ್ಚು ಮಾಡುವಂತೆ ಶಿಫಾರಸ್ಸು ಮಾಡಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ (ಎನ್.ಐ.ಡಿ.ಎಂ.) ರೂಪಿಸಿದ ಸಮಿತಿ ತನ್ನ ವರದಿ ಸಲ್ಲಿಸಿದ್ದು, ವಯಸ್ಕರಂತೆ ಮಕ್ಕಳೂ ಸಮಾನ ಅಪಾಯ ಎದುರಿಸುತ್ತಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಮಕ್ಕಳು ಸೋಂಕಿತರಾದರೆ ಚಿಕಿತ್ಸೆ ನೀಡಲು ಅಗತ್ಯವಾದ ವೆಂಟಿಲೇಟರ್, ಆಂಬ್ಯುಲೆನ್ಸ್ ಇತ್ಯಾದಿಗಳು ಇಲ್ಲ ಎಂದು ಪ್ರಧಾನ ಮಂತ್ರಿ ಕಛೇರಿಗೆ ಸಲ್ಲಿಸಲಾಗಿರುವ ವರದಿಯಲ್ಲಿ ತಿಳಿಸಲಾಗಿದೆ.

**ದೇಶದಲ್ಲಿ 10.4 ಕೋಟಿ ಜನರು ಮಾತ್ರ ಪೂರ್ಣ ಲಸಿಕೆ ಪಡೆದಿದ್ದಾರೆ. ಲಸಿಕೆ ಪ್ರಮಾಣ ಹೆಚ್ಚಿಸದೇ ಹೋದರೆ ಮುಂದಿನ ಅಲೆಯಲ್ಲಿ ಪ್ರತಿದಿನ 6 ಲಕ್ಷದ ವರೆಗೆ ಪ್ರಕರಣಗಳು ಬರಬಹುದು. ಮೂರನೇ ಅಲೆ ಬಂದಾಗ ಮಕ್ಕಳ ಮೇಲೆ ಅತಿ ಹೆಚ್ಚು ಪರಿಣಾಮವಾಗಲಿದೆ ಎಂಬ ಭೀತಿಗೆ ಯಾವುದೇ ಕಾರಣಗಳಿಲ್ಲ. ಆದರೆ, ವೈರಸ್ ಪರಿವರ್ತನೆಯಾಗುತ್ತಿದೆ. ಮಕ್ಕಳಿಗೆ ದೇಶದಲ್ಲಿ ಇನ್ನೂ ಲಸಿಕೆ ಸಿಗದ ಕಾರಣ, ಅವರ ರಕ್ಷಣೆ ಸವಾಲಾಗಿದೆ ಎಂದು ಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ.**



ದೇಶದಲ್ಲಿ ಕೊರೊನಾದ ಮೂರನೇ ಅಲೆ ಬರುವುದು ಅನಿವಾರ್ಯವಾಗಿದೆ ಎಂದು ಪ್ರಮುಖ ಪರಿಣಿತರು ಹೇಳಿದ್ದಾರೆ. ನಾವು ಸಮುದಾಯ ಹರಡುವಿಕೆ ಮೂಲಕ ಇಲ್ಲವೇ ಲಸಿಕೆಯ ಮೂಲಕ ಪೂರ್ಣ ಪ್ರಮಾಣದ ರೋಗ ನಿರೋಧಕತೆ ಗಳಿಸಬೇಕಿದೆ. ಅಲ್ಲಿಯವರೆಗೂ ಕೊರೊನಾ ಅಲೆಗಳು ಬರುತ್ತವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಐಐಟಿ ಕಾನ್‌ಪುರದ ಪರಿಣಿತರ ಅಂದಾಜು ಆಧರಿಸಿ ಎನ್‌ಐಡಿಎಂ ವರದಿ ರೂಪಿಸಲಾಗಿದೆ. ಅದರ ಪ್ರಕಾರ, ಅಕ್ಟೋಬರ್ ವೇಳೆಗೆ ಗರಿಷ್ಠ ದಿನಕ್ಕೆ 3.2 ಲಕ್ಷ ಸೋಂಕು ಬರಬಹುದು. ಇಲ್ಲವೇ ಹೊಸ ರೂಪಾಂತರಿ ಕಂಡು ಬಂದು ಸೆಪ್ಟೆಂಬರ್‌ನಲ್ಲಿ ಪ್ರತಿನಿತ್ಯ 5 ಲಕ್ಷದವರೆಗೆ ಸೋಂಕು (3ನೇ ಪುಟಕ್ಕೆ)

## ಮಾರುತಿ ಸುಜುಕಿಗೆ 200 ಕೋಟಿ ದಂಡ

ನವದೆಹಲಿ, ಆ. 23 - ಅನುಚಿತ ವಾಣಿಜ್ಯ ವರ್ತನೆ ಯಲ್ಲಿ ತೊಡಗಿದ್ದ ಕಾರಣಕ್ಕಾಗಿ ಮಾರುತಿ ಸುಜುಕಿ ಇಂಡಿಯಾಗೆ ಸ್ಪರ್ಧಾ ಆಯೋಗ 200 ಕೋಟಿ ರೂ.ಗಳ ದಂಡ ವಿಧಿಸಿದೆ.

ಪ್ರಯಾಣಿಕರ ವಾಹನ ವಿಭಾಗದಲ್ಲಿ ಸ್ಪರ್ಧಾ ವಿರೋಧಿ ನೀತಿ ಹೊಂದಿದ್ದ ಕಾರಣಕ್ಕಾಗಿ ದಂಡ ವಿಧಿಸಿರುವುದಾಗಿ ಆಯೋಗದ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ರೈಲು, ರಸ್ತೆ, ವಿಮಾನಗಳಿಂದ ಹಿಡಿದು ಅನಿಲ ಮಾರ್ಗದವರೆಗೆ 'ನಗದೀಕರಣ'

ನವದೆಹಲಿ, ಆ. 23 – ಪ್ರಯಾಣಿಕರ ರೈಲು, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ, ರಸ್ತೆ ಹಾಗೂ ಕ್ರೀಡಾಂಗಣ ಗಳಿಂದ ಹಿಡಿದು ಹಲವಾರು ಮೂಲಭೂತ ಸೌಲಭ್ಯಗಳ ವಲಯಗಳಲ್ಲಿ ಖಾಸಗಿ ಕಂಪನಿಗಳನ್ನು ಸಹಭಾಗಿ ಮಾಡಿಕೊಳ್ಳುವ ಮೂಲಕ 6 ಲಕ್ಷ ಕೋಟಿ ರೂ.ಗಳನ್ನು ಪಡೆಯುವ ರಾಷ್ಟ್ರೀಯ ನಗದೀಕರಣ ಮಾರ್ಗ (ನ್ಯಾಷನಲ್ ಮಾನಿಟೈಸೇಷನ್ ಪೈಪ್‌ಲೈನ್) ಜಾರಿಗೆ ತರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

**ಖಾಸಗಿ ಸಹಭಾಗಿತ್ವದಲ್ಲಿ 6 ಲಕ್ಷ ಕೋಟಿ ರೂ. ಪಡೆಯಲು ಕೇಂದ್ರದ ನಿರ್ಧಾರ**

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ 25 ವಿಮಾನ ನಿಲ್ದಾಣಗಳು, 40 ರೈಲ್ವೆ ನಿಲ್ದಾಣ, 15 ರೈಲ್ವೆ ಕ್ರೀಡಾಂಗಣ ಹಾಗೂ ಹಲವಾರು ರೈಲ್ವೆ ಬಡಾವಣೆಗಳನ್ನು ಖಾಸಗಿ ಹೂಡಿಕೆಗೆ ಗುರುತಿಸಲಾಗಿದೆ (3ನೇ ಪುಟಕ್ಕೆ)

### ಒಡವೆಗಳ ಮೇಲೆ ಹೆಚ್‌ಯುಐಡಿ ಕಡ್ಡಾಯಕ್ಕೆ ವಿರೋಧ

## ಚಿನ್ನ-ಬೆಳ್ಳಿ ಅಂಗಡಿಗಳು ಬಂದ್



ದಾವಣಗೆರೆ, ಆ.23- ಕೇಂದ್ರ ಸರ್ಕಾರವು ಒಡವೆಗಳ ಮೇಲೆ ಹೆಚ್‌ಯುಐಡಿ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ನಗರದಲ್ಲಿಂದು ದಿ ದಾವಣಗೆರೆ ಜ್ಯುಯಲರ್ಸ್ ಅಸೋಸಿಯೇಷನ್ ನೇತೃತ್ವದಲ್ಲಿ ಚಿನ್ನ-ಬೆಳ್ಳಿ ಅಂಗಡಿಗಳನ್ನು ಬಂದ್ ಮಾಡಿ ಸರ್ಕಾರದ ಗಮನ ಸೆಳೆಯಲಾಯಿತು. ನಂತರ ಪ್ರತಿಭಟನೆ ನಡೆಸಲಾಯಿತು. ಈ ಬಂದ್ ಗೆ ಜಿಲ್ಲೆಯ ಚಿನ್ನ-ಬೆಳ್ಳಿ ವರ್ತಕರು ಬೆಂಬಲ ಸೂಚಿಸಿದ್ದರು.

ಕೇಂದ್ರ ಸರ್ಕಾರ ಚಿನ್ನಾಭರಣಗಳ ಮೇಲೆ ಹಾಲ್ ಮಾರ್ಕ್ ಮತ್ತು ಹೆಚ್‌ಯುಐಡಿಯನ್ನು ಕಡ್ಡಾಯಗೊಳಿಸಿದೆ. ಇದರಲ್ಲಿ ಹಾಲ್‌ಮಾರ್ಕ್ ಹಾಕಲು ನಮ್ಮ ಅಭ್ಯಂತರವಿಲ್ಲ. ಆದರೆ, ಹಾಲ್‌ಮಾರ್ಕ್ ಯೂನಿಟ್ ಐಡೆಂಟಿಫಿಕೇಷನ್ ಡಿಸ್ಕ್ರಿಪ್ಷನ್‌ನನ್ನು ಕಡ್ಡಾಯಗೊಳಿಸಿರುವುದರಿಂದ ಪ್ರತಿಯೊಬ್ಬ ಚಿನ್ನ- (3ನೇ ಪುಟಕ್ಕೆ)

## ರಾಷ್ಟ್ರೀಯ ಶಿಕ್ಷಣ ನೀತಿಗೆ ಚಾಲನೆ

### ಕರ್ನಾಟಕ ರಾಜ್ಯವೇ ನೂತನ ನೀತಿಯಲ್ಲಿ ಮೊದಲು




ಬೆಂಗಳೂರು, ಆ. 23- ರಾಷ್ಟ್ರದಲ್ಲಿಯೇ ಮೊದಲು ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020 ಅನ್ನು ವಿಧ್ಯುಕ್ತವಾಗಿ ಜಾರಿಗೆ ತರಲಾಯಿತು. ಇದರೊಂದಿಗೆ ರಾಜ್ಯವು ಶೈಕ್ಷಣಿಕ ಕ್ಷೇತ್ರದಲ್ಲಿ ಐತಿಹಾಸಿಕ ಹೆಜ್ಜೆ ಇರಿಸಿದಂತಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ನವದೆಹಲಿಯಿಂದಲೇ ವರ್ಚ್ಯುಯಲ್ ವೇದಿಕೆ ಮೂಲಕ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು, ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020 ಜಾರಿಗೆ ಹಸಿರು ನಿಶಾನೆ ತೋರಿಸಿದರಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಸದಾ ಮುಂಚೂಣಿಯಲ್ಲಿರುವ ಕರ್ನಾಟಕದಲ್ಲಿ ಇಂದಿನಿಂದ ಹೊಸ ಮನ್ವಂತರ ಆರಂಭವಾಗಿದೆ ಎಂದು ಘೋಷಿದರು.

ಇದೇ ವೇದಿಕೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಕಲಿಕೆಗೆ ಉನ್ನತ ಶಿಕ್ಷಣ ವಿಭಾಗದಲ್ಲಿ ಇಂದಿನಿಂದಲೇ ವಿದ್ಯಾರ್ಥಿಗಳ ದಾಖಲಾತಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಈ ವರ್ಷ ಮೊದಲ ಪದವಿಗೆ ದಾಖಲಾಗುವ ಎಲ್ಲ ವಿದ್ಯಾರ್ಥಿಗಳಿಗೂ ಸರ್ಕಾರವೇ ಉಚಿತವಾಗಿ ಟ್ಯಾಬ್ಲೆಟ್ ಪಿಸಿಗಳನ್ನು ನೀಡಲಿದೆ ಎಂದು ಘೋಷಣೆ ಮಾಡಿದರು.

ಶಿಕ್ಷಣ ನೀತಿ ಜಾರಿಗೆ ಬಂದ ಬೆನ್ನಲ್ಲೇ ಉನ್ನತ ಶಿಕ್ಷಣಕ್ಕೆ ನೂತನ ವಿದ್ಯಾರ್ಥಿಗಳನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಡಿ ದಾಖಲು ಮಾಡಿಕೊಳ್ಳುವ ಪ್ರಕ್ರಿಯೆಗೆ (3ನೇ ಪುಟಕ್ಕೆ)

## ಬಂದೂಕು ಸ್ವಚ್ಛಗೊಳಿಸುವ ವೇಳೆ ಆಕಸ್ಮಿಕ ಗುಂಡು ಹಾರಿ ಪೇದೆ ಸಾವು

ದಾವಣಗೆರೆ, ಆ.23- ಬಂದೂಕು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಪಿಸ್ತೂಲ್‌ನಿಂದ ಆಕಸ್ಮಿಕವಾಗಿ ಹಾರಿದ ಗುಂಡು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪೊಲೀಸ್ ಪೇದೆ ಕುತ್ತಿಗೆಗೆ ತಗುಲಿ ಸಾವನ್ನಪ್ಪಿರುವ ಘಟನೆ ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆಯಲ್ಲಿನ ಶಸ್ತ್ರಾಗಾರದಲ್ಲಿ ಇಂದು ನಡೆದಿದೆ.



ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಕಾನ್ಸ್‌ಟೇಬಲ್ ಚೇತನ್ ಮೃತಪಟ್ಟ ದುರ್ದೈವಿ. ತಾಲ್ಲೂಕಿನ ಹುಣಸೆಕಟ್ಟೆಯ ಬಳಿ ಇಂದು ಬೆಳಿಗ್ಗೆ ಸಿಬ್ಬಂದಿಗಳಿಗಾಗಿ ಬಂದೂಕು ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಶಿಬಿರದ ನಂತರ ಮರಳಿ ನಗರದ ಡಿಆರ್ ಕೇಂದ್ರಕ್ಕೆ ಎಲ್ಲ ಸಿಬ್ಬಂದಿಗಳು ಮರಳಿದ್ದರು.

ಫೈರಿಂಗ್ ತರಬೇತಿ ಮುಗಿಸಿಕೊಂಡು ಬಂದ ನಂತರ ಪದ್ಧತಿಯಂತೆ ಬೆಳಿಗ್ಗೆ 11 ಗಂಟೆಗೆ ಅವುಗಳನ್ನು ಸ್ವಚ್ಛಗೊಳಿಸುವ ವೇಳೆ ಆಕಸ್ಮಿಕವಾಗಿ ಪಿಸ್ತೂಲ್‌ನಿಂದ ಹಾರಿದ ಗುಂಡು ಕುತ್ತಿಗೆಗೆ ತಾಗಿ, ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೇ ಅಸುನೀಗಿದ್ದಾರೆ. ಸ್ಥಳಕ್ಕೆ ಐಜಿಪಿ ರವಿ, ಎಸ್ಪಿ ಸಿ.ಬಿ. ರಿಷ್ಯಂತ್ ಭೇಟಿ ನೀಡಿ, ಪರಿಶೀಲನೆ ನಡೆಸಿ, ಘಟನೆಯ ಬಗ್ಗೆ ಮಾಹಿತಿ ಪಡೆದು ಇಲಾಖೆ ತನಿಖೆ ನಡೆಸುವಂತೆ ಸೂಚಿಸಿದ್ದಾರೆ. ಈ (2ನೇ ಪುಟಕ್ಕೆ)

## ನೆಮ್ಮದಿ ಜೀವನಕ್ಕೆ ಕಾರಣರಾದ ಪೌರಕಾರ್ಮಿಕರು ಪ್ರಾತಃಸ್ಮರಣೀಯರು

### ಪಂಚಮಸಾಲಿ ಕಾರ್ಯಕ್ರಮದಲ್ಲಿ ಮಾಜಿ ಉಪ ಮಹಾಪೌರ ಬಿ. ಲೋಕೇಶ್



ದಾವಣಗೆರೆ, ಆ. 23- ಕೊರೊನಾ ಮಹಾಮಾರಿಯನ್ನು ತಡೆಗಟ್ಟುವಲ್ಲಿ ವೈದ್ಯರು, ದಾದಿಯರು, ಆಸ್ಪತ್ರೆ ಸಿಬ್ಬಂದಿ, ಪೊಲೀಸರು ಸೇರಿದಂತೆ, ಕೊರೊನಾ ವಾರಿಯರ್ಸ್ ಸೇವೆ ಅಮೋಘವಾದುದು ಎಂದು ಹರಿಹರ ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಶ್ಲಾಘಿಸಿದರು.

ಹರ ಸೇವಾ ಸಂಸ್ಥೆ, ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ನಗರ ಘಟಕ, ನಗರ ಯುವ ಘಟಕ ಮತ್ತು ನಗರ ಮಹಿಳಾ ಘಟಕಗಳ ಸಂಯುಕ್ತಾಶ್ರಯದಲ್ಲಿ ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಕೊರೊನಾ ವಾರಿಯರ್ಸ್ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮಗೆ ಸೇವೆ ಮಾಡಲು ಸಾಧ್ಯವಾಗದಿದ್ದರೂ, ಸಮಾಜದಲ್ಲಿ ನಿಸ್ವಾರ್ಥ ಸೇವೆ ಮಾಡುತ್ತಿರುವ ಸಾಧಕರನ್ನು ಗುರುತಿಸುತ್ತಿರುವುದು ಕೂಡ ಪುಣ್ಯದ ಕೆಲಸವಾಗಿದೆ. ಪಂಚಮಸಾಲಿ ಸಮಾಜ ಪ್ರತಿ ವರ್ಷ ಸಾಮೂಹಿಕ ವಿವಾಹ ಮಾಡುವ ಮೂಲಕ ಸಮಾಜದ ಬಡ ಜನರಿಗೆ ನೆರವಾಗುತ್ತಾ ಬಂದಿದೆ. (3ನೇ ಪುಟಕ್ಕೆ)

## ಐ.ಟಿ. ಪೋರ್ಟಲ್ ತೊಡಕು ನಿವಾರಣೆಗೆ ಸೆ.15ರ ಗಡುವು

ನವದೆಹಲಿ ಆ. 23 – ಆದಾಯ ತೆರಿಗೆ ವೆಬ್ ತಾಣದಲ್ಲಿ ಉಂಟಾಗಿರುವ ತೊಡಕುಗಳನ್ನು ಸೆಪ್ಟೆಂಬರ್ 15ರ ಒಳಗೆ ಬಗೆಹರಿಸುವಂತೆ ಇನ್ಫೋಸಿಸ್‌ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗಡುವು ನೀಡಿದ್ದಾರೆ.

ಪೋರ್ಟಲ್ ಆರಂಭವಾದ ಎರಡೂವರೆ ತಿಂಗಳ ನಂತರವೂ ತೊಡಕುಗಳು ನಿವಾರಣೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಕಂಪನಿಯ ಎಂಡಿ ಹಾಗೂ ಸಿಇಒ ಸಲೀಲ್ ಪಾರೆಖ್ ಅವರನ್ನು ತಮ್ಮ ಕಚೇರಿಗೆ ಕರೆಸಿಕೊಂಡಿದ್ದ ಸೀತಾರಾಮನ್, ತೊಡಕುಗಳು ಮುಂದುವರೆದಿರುವುದಕ್ಕೆ ತೀವ್ರ ಅಸಮಾಧಾನ ಹಾಗೂ ಕಳವಳ ವ್ಯಕ್ತಪಡಿಸಿದ್ದಾರೆ.

ನಂತರ ಹೇಳಿಕೆ (3ನೇ ಪುಟಕ್ಕೆ)

## ದೂಡಾ ನಿವೇಶನಕ್ಕಾಗಿ ಮುಂದುವರಿದ ಜನ ಜಾತ್ರೆ

### ಉಚಿತ ನಿವೇಶನ ಎಂದು ಅರ್ಜಿ ಸಲ್ಲಿಸಲು ಬರುವವರೇ ಹೆಚ್ಚು

ದಾವಣಗೆರೆ, ಆ. 23- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವಸತಿ ಬಡಾವಣೆ ಯಲ್ಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಕರೆಯಲಾಗಿರುವ ಬೇಡಿಕೆ ಸಮೀಕ್ಷೆಗಾಗಿ ಅರ್ಜಿಸಲ್ಲಿಸಲು ಜನತೆ ಮುಗಿ ಬೀಳುತ್ತಲೇ ಇದ್ದಾರೆ.

ಅರ್ಜಿ ಸ್ವೀಕರಿಸುವಾಗಿನಿಂದಲೂ ಇಂದಿನವರೆಗೂ ಜನ ಬೆಳಿಗ್ಗೆಯಿಂದ ಸಂಜೆ ವರೆಗೂ ಸರದಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಸುತ್ತಿದ್ದಾರೆ. ಕೆಲವರು ಉಚಿತವಾಗಿ ನಿವೇಶನ ಹಂಚಲಾಗುತ್ತದೆ ಎಂಬ ಗಾಳಿ ಸುದ್ದಿಗೆ ಅರ್ಜಿ ಸಲ್ಲಿಸಲು ಮುಗಿ ಬಿದ್ದಿದ್ದಾರೆ. ಆರಂಭದಲ್ಲಿ ನಗರದ ಪಿ.ಬಿ. ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡ ಶಾಖೆಯಲ್ಲಿ ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕ ಸಲ್ಲಿಸಬೇಕೆಂದು ಪ್ರಾಧಿಕಾರದ (2ನೇ ಪುಟಕ್ಕೆ)

**ಸರ್ಕಾರಕ್ಕೆ ತುರ್ತಾಗಿ ಸಮೀಕ್ಷಾ ವರದಿ ಕಳುಹಿಸಬೇಕಿದೆ. ಅರ್ಜಿ ಸಲ್ಲಿಸಲು ಹೆಚ್ಚಿನ ಜನ ಬರುತ್ತಿದ್ದಾರೆ. ಇದರಿಂದ ಜನಕ್ಕೆ ತೊಂದರೆಯಾಗುತ್ತಿರುವುದೂ ಗಮನಕ್ಕೆ ಬಂದಿದೆ. ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಿಸುವ ಬಗ್ಗೆ ಸ್ಥಳೀಯ ಶಾಸಕರು, ದೂಡಾ ಅಧ್ಯಕ್ಷರೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು.**

**- ಬಿ.ಟಿ. ಕುಮಾರ ಸ್ವಾಮಿ, ಆಯುಕ್ತ, ದೂಡಾ**



### ನಿವೇಶನ ಉಚಿತವಲ್ಲ : ದೂಡಾ ಸ್ಪಷ್ಟನೆ

**ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ವಸತಿ ಬಡಾವಣೆಗಳಲ್ಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಜಮೀನು ಖರೀದಿಗೆ ಸಂಬಂಧಿಸಿದಂತೆ ನಿವೇಶನ ಹಂಚಿಕೆ ಮಾಡುವ ಕುರಿತು ಬೇಡಿಕೆ ಸಮೀಕ್ಷೆಯನ್ನು ಸರ್ಕಾಕ್ಕೆ ಕಳುಹಿಸಬೇಕಿದೆ.**

**ಬೇಡಿಕೆ ಸಮೀಕ್ಷೆ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ, ಭೂಮಿ ಖರೀದಿಗೆ ಮಂಜೂರಾತಿ ನೀಡಿದ ನಂತರ ಭೂಮಿ ಖರೀದಿಸಿ, ಬಡಾವಣೆ ಅಭಿವೃದ್ಧಿ ಪಡಿಸಿ, ನಿವೇಶನ ಹಂಚಿಕೆ ಕುರಿತು ಮತ್ತೆ ಪ್ರವರ್ಗವಾರು ಅರ್ಜಿ ಆಹ್ವಾನಿಸಲಾಗುತ್ತದೆ.**

**ಅರ್ಜಿ ಆಹ್ವಾನಿಸುವ ಸಂದರ್ಭದಲ್ಲಿ ಈಗ ಬೇಡಿಕೆ ಸಮೀಕ್ಷೆಯಲ್ಲಿ ನೋಂದಣಿ ಮಾಡಿಕೊಳ್ಳಲಾದ ಅರ್ಜಿದಾರರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ದೂಡಾ ಸ್ಪಷ್ಟಪಡಿಸಿದೆ. ಪ್ರಾಧಿಕಾರವು ಖರೀದಿಸಿದ ಭೂಮಿ ವೆಚ್ಚ ಹಾಗೂ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವೆಚ್ಚ ಸೇರಿ ನಂತರ ನಿವೇಶನದ ದರವನ್ನು ನಿಗದಿಪಡಿಸಲಾಗುತ್ತದೆಯೇ ಹೊರತು, ಉಚಿತವಾಗಿ ನಿವೇಶನ ನೀಡಲಾಗುತ್ತದೆ ಎಂದು ಜನತೆ ತಪ್ಪಾಗಿ ಭಾವಿಸಬಾರದು ಎಂದು ದೂಡಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.**

# ಆಹಾರ ಕಿಟ್ ಹಂಚಿಕೆಯಲ್ಲಿ ಕಾರ್ಮಿಕರಿಗೆ ವಿಳಂಬ ಧೋರಣೆ

ಹೊನ್ನಾಳಿ, ಆ.23 - ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕುಗಳಿಗೆ ಕಾರ್ಮಿಕ ಇಲಾಖೆಯಿಂದ 13 ಸಾವಿರ ಆಹಾರದ ಕಿಟ್‌ಗಳು ಬಂದಿದ್ದು, ಒಂದು ತಿಂಗಳಾದರು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವಲ್ಲಿ ಇಲಾಖೆಯು ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಆರೋಪಿಸಿದ್ದಾರೆ.

ಎಪಿಎಂಸಿ ಆವರಣದಲ್ಲಿರುವ ಖಾಸಗಿ ಗೋಡೌನ್ ನಲ್ಲಿರುವ ಕಿಟ್‌ಗಳ ತಪಾಸಣೆ ನಡೆಸಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಕಳೆದ ಕೆಲ ದಿನಗಳ ಹಿಂದೆ ನ್ಯಾಮತಿ ತಾಲ್ಲೂಕಿನಲ್ಲಿ ಸಭೆ ನಡೆಸಿ ಸುಮಾರು 3 ಸಾವಿರ ಕಿಟ್ ಹಂಚಿಕೆ ಮಾಡಿದ್ದೇವೆ ಎನ್ನುವ ಅಧಿಕಾರಿಗಳು ಉಳಿದ 9 ಸಾವಿರ ಕಿಟ್‌ಗಳು ಗೋಡೌನ್‌ನಲ್ಲಿರುವ ಬಗ್ಗೆ ಅನುಮಾನವಿದೆ ಎಂದರು.

ತಾಲ್ಲೂಕು ಕಾರ್ಮಿಕ ಇಲಾಖೆ ನಿರೀಕ್ಷಕ ರಾಜಶೇಖರ ರವರನ್ನು ಸ್ಥಳಕ್ಕೆ ಕರೆಸಿ ಕಿಟ್ ಹಂಚಿಕೆಯ ವಿಳಂಬದ ಬಗ್ಗೆ ಚರ್ಚಿಸಿದರು.

ಗೋಡೌನ್ ಎಪಿಎಂಸಿ ಆವರಣದಲ್ಲಿದ್ದರು ಕಿಟ್‌ಗಳ ಸಂಗ್ರಹಿಸಿರುವುದು ಪ್ರವೀಣ್ ಟ್ರೇಡರ್ಸ್ ಎಂಬ ಖಾಸಗಿ ಗೋಡೌನ್ ಆಗಿದ್ದು, ಯಾವುದೇ ಅಗ್ರಿಮೆಂಟ್ ಮಾಡಿಕೊಳ್ಳದೆ ಕಿಟ್ ಸಂಗ್ರಹಿಸುತ್ತಿರುವುದು ಕಾನೂನು ಬಾಹಿರವಾಗಿದೆ.

ಕಾರ್ಮಿಕ ಅಧಿಕಾರಿಯು ಇದೀಗ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡುತ್ತಿವೆ. 3 ಸಾವಿರ ನ್ಯಾಮತಿಯಲ್ಲಿ ಹಂಚಿಕೆ ಗೊಂಡಿದ್ದು ಹೊನ್ನಾಳಿ ತಾಲ್ಲೂಕಿಗೆ ಹಂಚಿಕೆಯ ಕಾರ್ಯ ಉಳಿದಿದೆ. ಅರ್ಹ ಫಲಾನುಭವಿಗಳನ್ನು ಹೊರತುಪಡಿಸಿ ಯಾರಿಗೂ ಅಕ್ರಮವಾಗಿ ಹಂಚಿಕೆ ಮಾಡಿಲ್ಲ ಎಂದರು.

ನಂತರ ತಹಶೀಲ್ದಾರ್ ಕಛೇರಿಗೆ ತೆರಳಿದ ಶಾಂತನಗೌಡರು ಸಮಗ್ರ ತನಿಖೆ ನಡೆಸುವಂತೆ ತಹಶೀಲ್ದಾರ್ ಬಸನಗೌಡ ಕೋಟೂರ ಗಮನಕ್ಕೆ ತಂದು ಚರ್ಚಿಸಿ ಈ ಹಂಚಿಕೆಯಲ್ಲಿ ಕರ್ತವ್ಯ ಲೋಪವಾಗಿದ್ದರೆ ಸೂಕ್ತ ಕ್ರಮ ಕೈಗೊಳ್ಳುವಂತೆ ವಿಷಯವನ್ನು ಜಿಲ್ಲಾಧಿಕಾರಿಗಳು ಹಾಗು ಕಾರ್ಮಿಕ ಸಚಿವ ಹೆಬ್ಬರ್ ಅವರ ಗಮನಕ್ಕೆ ತರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದುರ್ಗೇಶ್, ಎಪಿಎಂಸಿ ಸದಸ್ಯ ಪ್ರಕಾಶ್, ಕಾಂಗೆಸ್ ಮುಖಂಡರಾದ ಅರಾಕ್ ಸಿದ್ದಪ್ಪ, ರಮೇಶ್, ಪಿಎಲ್‌ಡಿ ಬ್ಯಾಂಕ್ ಸದಸ್ಯ ಕುಳಗಟ್ಟೆ ಹನುಮಂತ, ಹರಳಹಳ್ಳಿ ಈಶ್ವರಪ್ಪ, ಯುವ ಕಾಂಗ್ರೆಸ್ ಪ್ರಶಾಂತ್, ಮಧುಗೌಡ ಅರಕೆರೆ, ಶಿವರಾಜ್, ಕರೇ ಗೌಡ್ರು ಇದ್ದರು.



ಮಾಜಿ ಶಾಸಕ ಶಾಂತನಗೌಡ ಖಂಡನೆ

## ಮೆಕ್ಕೆಜೋಳ, ತೊಗರಿ ಪ್ರಾತ್ಯಕ್ಷಿಕೆ



**ಅಗಸನಕಟ್ಟೆ**

ದಾವಣಗೆರೆ, ಆ.23- ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಿಂದ ತಾಲ್ಲೂಕಿನ ಅಗಸನಕಟ್ಟೆ ಗ್ರಾಮದಲ್ಲಿ ಮೆಕ್ಕೆಜೋಳ, ತೊಗರಿ ಮುಂಚೂಣಿ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿತ್ತು.

ತೊಗರಿ ಬೆಳೆಯಲ್ಲಿ ಗೂಡು ಮಾರು ಹುಳುವಿನ ಬಾಧೆ ಕಂಡುಬಂದಲ್ಲಿ ಪ್ರೊಫೆನೋಫಾಸ್ 2 ಎಂ.ಎಲ್ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ, ಸಿಂಪರಣೆ ಮಾಡುವುದರಿಂದ ಈ ಕೀಟವನ್ನು ಹತೋಟಿ ಮಾಡಬಹುದೆಂದು ಕೇಂದ್ರದ ವಿಜ್ಞಾನಿ ಹೆಚ್.ಎಂ. ಸಣ್ಣ ಗೌಡರು ಮಾಹಿತಿ ಒದಗಿಸಿದರು. ಈ ಸಂದರ್ಭದಲ್ಲಿ ಬೆಳೆಯ 60 ದಿವಸದ ನಂತರ ತೊಗರಿಯಲ್ಲಿ ಕುಡಿ ಚಿವುಟುವುದರಿಂದ ಅರೆ ಕೊಂಬುಗಳು ಜಾಸ್ತಿಯಾಗಿ ಇಳುವರಿ ಹೆಚ್ಚುತ್ತದೆ ಎಂದು ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಅವರು ಮಾಹಿತಿಯನ್ನು ಒದಗಿಸಿದರು.

## ಬಂದೂಕು ಗುಂಡು ಹಾರಿ ಪೇದೆ ಸಾವು

**(1ನೇ ಪುಟದಿಂದ)** ಕುರಿತು ಮಾತನಾಡಿರುವ ಐಜಿಪಿ ರವಿ, ಸೋಮವಾರ ಬೆಳಿಗ್ಗೆ 11ಕ್ಕೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡುವ ಸಂಗ್ರಹಗಾರದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಸಮಯದಲ್ಲಿ ಎಲ್ಲಾ ಶಸ್ತ್ರಗಳನ್ನು ಸ್ವಚ್ಛತೆ ಮಾಡಲಾಗುತ್ತಿತ್ತು. ಫೈರಿಂಗ್ ರೇಂಜ್‌ನಲ್ಲಿ ಪ್ರಾಕ್ಟೀಸ್ ಮಾಡಲು ತೆಗೆದುಕೊಂಡು ಹೋಗಿ ನಂತರ ಬಂದು ಎಲ್ಲವನ್ನೂ ಪದ್ದತಿ ಪ್ರಕಾರ ಕ್ಲೀನ್ ಮಾಡಬೇಕು. ಈ ವೇಳೆ ಆಕಸ್ಮಿಕವಾಗಿ ಒಂದು ಪಿಸ್ತೂಲ್‌ನಿಂದ ಗುಂಡು ಹಾರಿ ಚೇತನ್‌ನ ಕತ್ತಿನ ಭಾಗದಲ್ಲಿ ತಗುಲಿ ಅಸುನೀಗಿದ್ದಾರೆ ಎಂದು ಮಾಹಿತಿ ನೀಡಿದರು.

ಚೇತನ್ ಹೊಸದಾಗಿ ಸೇವೆಗೆ ಸೇರಿದ್ದ ಪೇದೆಗಳಿಗೆ ಡ್ರಿಲ್ ಹೇಳಿಕೊಡುತ್ತಿದ್ದರು. ಅವರು 2012ನೇ ಬ್ಯಾಚಿನವರು, ಚನ್ನಗಿರಿ ತಾಲ್ಲೂಕಿನ ಮಲಹಾಳ್ ಗ್ರಾಮದವರು.

## ಕೂಡ್ಲಿಗಿ: ಶಾಲೆ ಆರಂಭಕ್ಕೆ ವಿದ್ಯಾರ್ಥಿಗಳ ಉತ್ಸಾಹ




ಕೂಡ್ಲಿಗಿ, ಆ.23- ಕೊರೊನಾ ಸೋಂಕಿನ ಆರ್ಭಟದಿಂದ ಒಂದೂವರೆ ವರ್ಷದಿಂದ ಬಾಗಿಲು ಮುಚ್ಚಿದ್ದ ಶಾಲೆಗಳು ತಾಲ್ಲೂಕಿನಾದ್ಯಂತ ಇಂದು ಆರಂಭಗೊಂಡಿದ್ದು, ಮೊದಲ ದಿನವೇ ವಿದ್ಯಾರ್ಥಿಗಳು ಉತ್ಸಾಹದಿಂದ ಆಗಮಿಸಿದ್ದು ಕಂಡುಬಂತು.

ಶಾಲೆಗಳ ಆರಂಭಕ್ಕೆ ಶಿಕ್ಷಣ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಶಿಕ್ಷಕರೂ ಸಹ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಚ್ಚಿನ ಮುತುವರ್ಜಿ ವಹಿಸಿದ್ದಾರೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮಾಸ್ಕ್‌ಗಳನ್ನು ಕಡ್ಡಾಯವಾಗಿ ಧರಿಸಿದ್ದಲ್ಲದೆ, ತರಗತಿಯ ಕೊಠಡಿಗಳಲ್ಲಿ ದೈಹಿಕ ಅಂತರ ಕಾಪಾಡಿಕೊಂಡಿದ್ದಾರೆ.

ಕೂಡ್ಲಿಗಿ ಮತ್ತು ಕೊಟ್ಟೂರು ತಾಲ್ಲೂಕಿನಲ್ಲಿ ಸರ್ಕಾರಿ-27, ಅನುದಾನಿತ-25 ಹಾಗೂ ಅನುದಾನರಹಿತ 23 ಹಾಗೂ ಮೊರಾರ್ಜಿ-4 ಸೇರಿ ಒಟ್ಟು 79 ಪ್ರೌಢಶಾಲೆಗಳಿದ್ದು, ಒಂದೊಂದು ಕೊಠಡಿಗೆ ತಲಾ 20 ವಿದ್ಯಾರ್ಥಿಗಳಿಗೆ ಮಾತ್ರ ಕುಳಿತುಕೊಳ್ಳಲು ಅವಕಾಶ ನೀಡಲಾಗಿತ್ತು.

ವಿದ್ಯಾರ್ಥಿಗಳನ್ನು ಶಾಲೆಗೆ ಕಳುಹಿಸಿದ್ದ ಪಾಲಕರಿಂದ ಕಡ್ಡಾಯವಾಗಿ ಒಪ್ಪಿಗೆ ಪತ್ರವನ್ನು ಪಡೆಯಲಾಗಿದೆ ಎಂದು ಬಿಇಒ ಉಮಾದೇವಿ ತಿಳಿಸಿದ್ದಾರೆ. ಕೂಡ್ಲಿಗಿ ತಾಲ್ಲೂಕಿನ 79 ಪ್ರೌಢಶಾಲೆಗಳ ಆರಂಭದ ಮೊದಲ ದಿನವೇ ವಿದ್ಯಾರ್ಥಿಗಳು ಉತ್ಸಾಹದಿಂದ ಆಗಮಿಸಿದ್ದರು.

## ಹರಿಹರ ತಾಲ್ಲೂಕಿನಲ್ಲಿ 50 ಕ್ಕೂ ಹೆಚ್ಚು ಶಾಲೆಗಳು ಆರಂಭ




ಹರಿಹರ, ಆ.23- ಹರಿಹರ ತಾಲ್ಲೂಕಿನ 50 ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ಶಾಲೆಗಳು ತರಗತಿ ಪುನರಾರಂಭ ಮಾಡಿವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ತಿಳಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಹಲವು ತಿಂಗಳುಗಳ ಕಾಲ ಶಾಲೆಗಳು ಮುಚ್ಚಿದ್ದು, ಆನ್‌ಲೈನ್‌ನಲ್ಲಿ ಮಕ್ಕಳಿಗೆ ಪಾಠ ಮಾಡಲಾಗುತ್ತಿತ್ತು. ಸದ್ಯ ಕೊರೊನಾ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬರುತ್ತಿದ್ದು, ಸರ್ಕಾರದ ಆದೇಶದಂತೆ ಶಾಲೆಗಳಲ್ಲಿ ತರಗತಿಗಳು ಪ್ರಾರಂಭವಾಗಿವೆ.

ಶಾಲೆಯ ಸುತ್ತಮುತ್ತ ಸ್ಯಾನಿಟೈಸರ್ ಮಾಡಲಾಗಿತ್ತು, ಮಕ್ಕಳನ್ನು ತಪಾಸಣೆ ನಡೆಸಿ, ಗುಲಾಬಿ ಹೂ ನೀಡಿ, ಆರತಿ ಬೆಳಗಿ ಸ್ವಾಗತಿಸಲಾಯಿತು. ಶಾರದಾ ದೇವಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಿಪ್ಪೇರುದ್ರಸ್ವಾಮಿ ಶಾಲೆಯ ಶಿಕ್ಷಕ ಬಿ.ಬಿ. ರೇವಣ್ಣನಾಯ್ಕ್, ನೌಕರರ ಸಂಘದ ಖಜಾಂಚಿ ಶಿವಮೂರ್ತಿ ಇನ್ನಿತರರು ಹಾಜರಿದ್ದರು.

## ಕರುಣೆ ತೋರಿದ ಗುರುರಾಯ



ಕರುಣೆ ತೋರಿದ ಗುರುರಾಯ,
ಇಳೆಗೆ ಮಳೆ ಸುರಿಸಿದ ಮಹಾರಾಯ !

ಸುಲಭನೋ ಹರಿ ತನ್ನವರನು
ಅರೆಘಳಿಗೆ ಬಿಟ್ಟು
ಅಗಲನೋ ಎಂದು
ದಾಸರು ಹಾಡಿದರು ಅಂದು, ನಂಬಿ
ಕರೆದರೆ ಓ ಗೊಡುವರು ರಾಯರು ಇಂದು

ಪಾಮರನ ಭಕುತಿಗೆ ಒಲಿದ ಗುರುವೇ
ಜಗದ ಜನತೆಗೆ ಹರ್ಷವ ನೀಡಿದ ಸದ್ಗುರುವೇ, ಮನದ
ಒಣ ಪ್ರತಿಷ್ಠೆ ಯ ಬಿಡಿಸಿ ದಿನವೂ ನಿನ್ನೆಡೆಗೆ ಸೆಳೆವ ಮಾಂತ್ರಿಕ
ಗುರುವೇ, ಮಾಡಿಸು ನನ್ನಲಿ ಸತ್ಕರ್ಮವ ದಿನ ದಿನವೂ

ಬೀಗಿದ ಈ ದೇಹವನು ಬಾಗಿಸು ನಿನ್ನ ಚರಣಕೆ, ಮೂಡಿಸು
ನನ್ನಲಿ ನವಚೈತನ್ಯವನು, ಮಾಡುವೆನು ದಿನ ದಿನವೂ ನಿನ್ನ
ವೃಂದಾವನಕೆ ಭಕ್ತಿಯ ನೂರೆಂಟ್ ನಮನವನು, ತೋರಿಸು
ಎನಗೆ ಶ್ರೀ ಹರಿಯ ಕಾರುಣ್ಯದ ದೃಷ್ಟಿಯನು

-ಡಾ. ಸಿ. ಕೆ. ಆನಂದತೀರ್ಥಾಚಾರ್

## ಕಾಂಗ್ರೆಸ್ ಮುಖಂಡ ಶ್ರೀನಿವಾಸ್‌ರಿಂದ ಶಾಲೆಗಳಿಗೆ ಭೇಟಿ



ಹರಿಹರ, ಆ.23- ಎರಡು ವರ್ಷಗಳ ನಂತರ ಇಂದು ಶಾಲೆಗಳು ಆರಂಭವಾಗಿದ್ದು, ಕಾಂಗ್ರೆಸ್ ಮುಖಂಡ ಎನ್.ಹೆಚ್. ಶ್ರೀನಿವಾಸ್ ಹರಿಹರದ ಎಂಆರ್‌ಬಿ ಪ್ರೌಢಶಾಲೆ, ಗಿರಿರಾಜ ಪ್ರೌಢಶಾಲೆ ಸೇರಿದಂತೆ ಇನ್ನಿತರೆ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ಸಿಹಿ ಹಂಚುವುದರ ಮೂಲಕ ವಿದ್ಯಾರ್ಥಿಗಳಿಗೆ ಕೋವಿಡ್ ನಿಯಮಗಳನ್ನು ಪಾಲನೆ ಮಾಡಲು ಹೇಳಿ ಅವರಲ್ಲಿ ಆತ್ಮಸ್ಥೈರ್ಯ ತುಂಬಿದರು.

## ಭದ್ರಾ ಸಹಕಾರಿ ಸಕ್ಕರೆ ಕಂಪನಿ ಆಸ್ತಿಯ ಹರಾಜು ರದ್ದುಪಡಿಸಲು ಒತ್ತಾಯ

ದಾವಣಗೆರೆ, ಆ.23- ದೊಡ್ಡಬಾತಿ ಗ್ರಾಮದ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆಸ್ತಿಯ ಬಹಿರಂಗ ಹರಾಜು ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ನೊಂದ ನಿವೃತ್ತ ಕಾರ್ಮಿಕ ಟಿ.ಆರ್. ದ್ವಾರಕಾನಾಥ್ ಅವರು ಮುಖ್ಯಮಂತ್ರಿ ಗಳಿಗೆ ಮನವಿ ಸಲ್ಲಿಸಿದ್ದಾರೆ.


ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನವರು ದಿನಾಂಕ 27-01-2017 ರಂದು ಬಹಿರಂಗವಾಗಿ ಹರಾಜು ಮಾಡಿರುವ ಪ್ರಕ್ರಿಯೆಯಲ್ಲಿ ಲೋಪದೋಷವಿರುವುದರಿಂದ ಈ ಹರಾಜನ್ನು ರದ್ದು ಪಡಿಸುವಂತೆ ಉಪ ಲೋಕಾಯುಕ್ತರು ರಾಜ್ಯ ಸರ್ಕಾರಕ್ಕೆ 2018 ರಲ್ಲಿ ಶಿಫಾರಸ್ಸು ಮಾಡಿದ್ದಾರೆ.

ಹರಾಜು ರದ್ದುಪಡಿಸಿದಲ್ಲಿ ಕೆಐಎಡಿಬಿಯವರು ಸದರಿ ಕಾರ್ಖಾನೆಗೆ ಲೀಸ್ ಆಧಾರದ ಮೇಲೆ ಕೊಟ್ಟಿರುವ 131.02 ಎಕರೆ ಜಮೀನನ್ನು ರಕ್ಷಣೆ ಮಾಡಿದಂತಾಗುತ್ತದೆ. 2004 ರಿಂದ ವೇತನ ಬಾಕಿ ನಿರೀಯಲ್ಲಿರುವ ಅಂದಾಜು 500 ಕಾರ್ಮಿಕರಿಗೆ ಸರ್ಕಾರದಿಂದ ಆರ್ಥಿಕ ನೆರವು ಪಡೆಯಲು ಅನುಕೂಲವಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

## ಹರಿಹರದಲ್ಲಿ ಇಂದು

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕ್ರೀಮ್ (ಸಿಆರ್‌ಇಎಮ್) ಯೋಜನೆಯ ಅನುಷ್ಠಾನದಲ್ಲಿ ಇಲಾಖೆಗಳ ಸಮನ್ವಯತೆ ಕುರಿತು ತಾಲ್ಲೂಕು ಮಟ್ಟದ ಕಾರ್ಯಾಗಾರವು ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

## ಹೆಚ್. ಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಲೋಕಿಕೆರೆ ವಾಸಿ ನಿವೃತ್ತ ಶಿಕ್ಷಕರು, ಶ್ರೀ ಬಾಲಾಜಿ ವಿದ್ಯಾಸಂಸ್ಥೆ (ರಿ) ಅಧ್ಯಕ್ಷರಾದ ಹೆಚ್. ಬಸಪ್ಪ (75) ಇವರು ದಿನಾಂಕ 23.08.2021ರ ಸೋಮವಾರ ಮಧ್ಯಾಹ್ನ 2.30ಕ್ಕೆ ನಿಧನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.08.2021ರ ಮಂಗಳವಾರ ಮಧ್ಯಾಹ್ನ 11. ಗಂಟೆಗೆ ಮೃತರ ಸ್ವಗ್ರಾಮವಾದ ಲೋಕಿಕೆರೆ ಅವರ ತೋಟದಲ್ಲಿ ನೆರವೇರಿಸಲಾಗುವುದು.

## 26 ಜಿಲ್ಲೆಗಳಲ್ಲಿ ಶಾಲೆಗಳ ಪುನರಾರಂಭ

**(1ನೇ ಪುಟದಿಂದ)** ಹಾಗೂ 5,000ಕ್ಕೂ ಹೆಚ್ಚು ಪಿಯುಸಿ ಕಾಲೇಜುಗಳಿವೆ. ಈ ಸಂಸ್ಥೆಗಳಲ್ಲಿ 9 ರಿಂದ 12ನೇ ತರಗತಿಗಳಲ್ಲಿ 25 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈಗ ಇವರೆಲ್ಲರೂ ನೇರ ತರಗತಿಗಳಿಗೆ ಹಾಜರಾಗಿದ್ದಾರೆ.

ಒಂದೂವರೆ ವರ್ಷದ ಬಳಿಕ ರಾಜ್ಯಾದ್ಯಂತ ಇಂದಿನಿಂದ ಶಾಲಾ-ಕಾಲೇಜುಗಳು ಆರಂಭವಾಗಿದ್ದು, ಮೊದಲ ದಿನ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೋವಿಡ್ ಪಾಸಿಟಿವಿಟಿ ದರ ಹೆಚ್ಚಳವಿರುವ ಜಿಲ್ಲೆಗಳಲ್ಲಿ ತರಗತಿಗಳನ್ನು ಆರಂಭ ಮಾಡಿಲ್ಲ. ಪಾಸಿಟಿವಿಟಿ ದರ ಶೇ.2ಕ್ಕಿಂತ ಕಡಿಮೆಯಾದರೆ ಅಲ್ಲೂ ಶಾಲಾ-ಕಾಲೇಜುಗಳನ್ನು ಆರಂಭ ಮಾಡುತ್ತೇವೆ. ಮಕ್ಕಳ ಶೈಕ್ಷಣಿಕ ಉನ್ನತಿ, ಭವಿಷ್ಯಕ್ಕಾಗಿ, ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸಿ ಶಾಲೆ ಆರಂಭಿಸುತ್ತಿದ್ದೇವೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ತರಗತಿಗಳಿಗೆ ಹಾಜರಾಗಲು ಪೋಷಕರ ಅನುಮತಿ ಪತ್ರ ಕಡ್ಡಾಯ ಮಾಡಲಾಗಿದೆ. ಇದೇ ವೇಳೆ ಆನ್‌ಲೈನ್ ತರಗತಿಗಳು ಮುಂದುವರೆಯ ಲಿದ್ದು, ನೇರ ತರಗತಿಗಳಿಗೆ ಹಾಜರಾಗಲಿಚ್ಛಿಸದ ವಿದ್ಯಾರ್ಥಿಗಳು ಆನ್‌ಲೈನ್ ಪಾಠ ಕೇಳಬಹುದು ಎಂದು ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಲ್ಲೇಶ್ವರದ ಸರಕಾರಿ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ, ಭೌತಿಕ ತರಗತಿಗಳ ಪ್ರಾರಂಭಕ್ಕೆ ಕೈಗೊಂಡಿರುವ ವ್ಯವಸ್ಥೆಗಳ ಕುರಿತು ಪರಿಶೀಲಿಸಿದರು.

ತರಗತಿಗೇ ಭೇಟಿ ನೀಡಿ ವಿದ್ಯಾರ್ಥಿಗಳ ಜತೆ ಮಾತನಾಡಿದ ಮುಖ್ಯಮಂತ್ರಿಗಳು, ಚೆನ್ನಾಗಿ ವ್ಯಾಸಂಗ ಮಾಡುವಂತೆ ಹುರಿದುಂಬಿಸಿದರು. ವಿವಿಧ ವಿಷಯಗಳ ಬಗ್ಗೆ ಮಕ್ಕಳ ಜತೆ ಸಂವಾದ ನಡೆಸಿದರು.

1ರಿಂದ 8ನೇ ತರಗತಿ ಪ್ರಾರಂಭದ ಸಂಬಂಧ ತಜ್ಞರ ಸಮಿತಿ ಈ ತಿಂಗಳಾಂತ್ಯಕ್ಕೆ ವರದಿ ನೀಡಲಿದ್ದು, ಅದರ ಪ್ರಕಾರ ಮುಂದಿನ ತೀರ್ಮಾನ ಮಾಡಲಾಗುವುದು ಎಂದ ಅವರು, ಯಾವುದೇ ಶಾಲೆಯಲ್ಲಿ ಕೇವಲ ಒಂದೇ ಒಂದು ಪಾಸಿಟಿವ್ ಪ್ರಕರಣ ಕಂಡು ಬಂದರೂ ಆ ಶಾಲೆಯನ್ನು ಒಂದು ವಾರ ಕಡ್ಡಾಯವಾಗಿ ಮುಚ್ಚುತ್ತೇವೆ ಎಂದರು.

## ನಿವೇಶನಕ್ಕಾಗಿ ಜನ ಜಾತ್ರೆ

**(1ನೇ ಪುಟದಿಂದ)** ಪ್ರಕಟಣೆಯಲ್ಲಿ ತಿಳಿಸ ಲಾಗಿತ್ತು. ಆದರೆ ಜನರಿಗೆ ಅನುಕೂಲತೆ ಕಲ್ಪಿಸುವ ದೃಷ್ಟಿಯಿಂದ ಪ್ರಾಧಿಕಾರದ ಕಚೇರಿ ಆವರಣದಲ್ಲಿಯೇ ಶುಲ್ಕ ಕಟ್ಟಿಸಿಕೊಳ್ಳಲು ಅನುವು ಮಾಡಿಕೊಡಲಾಯಿತು.

ಆದಾಗ್ಯೂ ಜನತೆ ಅರ್ಜಿ ಸಲ್ಲಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸುತ್ತಿರುವು ದರಿಂದ ಶುಲ್ಕ ತುಂಬಿಸಿಕೊಳ್ಳುವ ಹಾಗೂ ಅರ್ಜಿ ಸ್ವೀಕರಿಸುವ ಕೌಂಟರ್‌ಗಳನ್ನು ಹೆಚ್ಚಿಸಬೇಕೆಂಬುದು ಜನರ ಆಗ್ರಹವಾಗಿದೆ.

ಅರ್ಜಿ ಸಲ್ಲಿಕೆಗೆ ಇದೇ 26ನೇ ತಾರೀಖು ಕೊನೆಯ ದಿನ ಎಂದು ದೂಡಾ ಘೋಷಿಸಿರುವುದರಿಂದ ಜನರು ಅರ್ಜಿ ಗಳು ಸಿಗುತ್ತೋ ಇಲ್ಲವೋ ಎಂಬಂತೆ ಧಾವಿಸುತ್ತಿದ್ದಾರೆ. ಕೊರೊನಾ ಮರೆತು, ಮಾಸ್ಕ್ ಧರಿಸುವುದಾಗಲೀ, ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದನ್ನು ಮರೆತು ಜನತೆ ಮುಗಿ ಬೀಳುತ್ತಿರುವುದು ಇದೀಗ ಆತಂಕಕ್ಕೆ ಕಾರಣವಾಗಿದೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 23.08.2021ರ ಸೋಮವಾರ ನಿಧನರಾದ ಲೋಕಿಕೆರೆ ಶ್ರೀ ಬಾಲಾಜಿ ವಿದ್ಯಾಸಂಸ್ಥೆ (ರಿ) ಅಧ್ಯಕ್ಷರಾದ

**ಹೆಚ್. ಬಸಪ್ಪ**
(ನಿವೃತ್ತ ಶಿಕ್ಷಕರು)

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು
ಶ್ರೀ ಬಾಲಾಜಿ ಮಾಧ್ಯಮಿಕ ಪಾಠ ಶಾಲೆ
ಶ್ರೀ ಬಾಲಾಜಿ ಸಂಯುಕ್ತ ಪ್ರೌಢ ಶಾಲೆ, ಯರವನಾಗತಿಹಳ್ಳಿ ಕ್ಯಾಂಪ್,
ದಾವಣಗೆರೆ ದಕ್ಷಿಣ ವಲಯ

**ಮನೆಗಳು ಮಾರಾಟಕ್ಕಿವೆ**
ಗ್ಲಾಸ್ ಹೌಸ್ ಹತ್ತಿರ ಪಶ್ಚಿಮ 40x60 ಡೂಪ್ಲೆಕ್ಸ್ ಹೊಸ ಮನೆ, ಅಥಣಿ ಕಾಲೇಜು ಹತ್ತಿರ ಉತ್ತರ 30x43 1 ಮಳಿಗೆ ಕೆಳಗೆ ಮನೆ ಮೇಲೆ ಮನೆ ಮತ್ತೆ 2 ರೂಂ, ಬಸವೇಶ್ವರ ಲೇಔಟ್ ಪೂರ್ವ 25x30 ಡೂಪ್ಲೆಕ್ಸ್ ಮನೆ
ಐಗೂರು ವಿಜಯ್ ಕುಮಾರ್
99457 02495

**ಮನೆ ಬಾಡಿಗೆಗೆ**
ಮೊದಲನೇ ಮಹಡಿ, 3 ಅಟ್ಯಾಚ್ಡ್ ಬೆಡ್ ರೂಮ್, ಸ್ಟಡಿ ರೂಮ್, ಮುಂಭಾಗ ಮತ್ತು ಅಡುಗೆ ಮನೆ ಬಾಲ್ಕನಿ, ಕಾರ್ ಪಾರ್ಕಿಂಗ್.
ಟಿ-ಲಾಂಚ್ ಹತ್ತಿರ, ಎಂಸಿಸಿ ಬಿ ಬ್ಲಾಕ್,
RENT Rs. 16,000
99453 25199

**ಕಾರ್ನರ್ ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ 120 ಅಡಿ ರಿಂಗ್ ರೋಡ್ ಉತ್ತರ- ಪಶ್ಚಿಮ 70x70 ಕಾರ್ನರ್ ಮತ್ತು ಪಕ್ಕ 70x70, ಪೂರ್ವ ಉತ್ತರ 40x65, ಪೂರ್ವ ದಕ್ಷಿಣ 40x65 ಡಾಲರ್ಸ್ ಕಾಲೋನಿ ಪೂರ್ವ ಉತ್ತರ 45x60, ಮಹಾಲಕ್ಷ್ಮಿ ಲೇಔಟ್ ಪೂರ್ವ ಉತ್ತರ 30x70
ಐಗೂರು ವಿಜಯ್ ಕುಮಾರ್
99457 02495

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**ದೋಸೆ ಭಟ್ಟರು ಬೇಕು**
ಬೆಣ್ಣೆ ದೋಸೆ ಹೋಟೆಲ್ ಗೆ ದೋಸೆ ಭಟ್ಟರು ಮತ್ತು ಸಪ್ಲೈಯರ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಹಳೆ ಶ್ರೀ ಸಾಗರ್ ಬೆಣ್ಣೆದೋಸೆ ಹೋಟೆಲ್
ಮಹಿಳಾ ಸಮಾಜ ಕಾಂಪ್ಲೆಕ್ಸ್, ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ. ಮೊ. 97310-81119

**WANTED**
Sales Executives for field work for our products.
SS & Glass Railings & UPVC Windows Range.
K Sohanraj's winrail
opposite stadium complex Road.
94491 45676

**ಬೇಕಾಗಿದ್ದಾರೆ**
ಪ್ರಸಿದ್ಧ ಬ್ಯೂಟಿಕ್‌ನಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಕೆಲಸ ಮಾಡಲು ಮಹಿಳೆಯರು, ಸೇಲ್ಸ್ ಮ್ಯಾನ್, ಸೇಲ್ಸ್ ಗರ್ಲ್ಸ್ ಫ್ಯಾಷನ್ ಡಿಸೈನಿಂಗ್ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ
99800 32310

**Hombal e-Mart**
ಹೋಟೆಲ್‌ಗಳಿಗೆ ಮಿನಿ ವೆಜಿಟಬಲ್ ಶಾಪ್‌ಗಳಿಗೆ ತರಕಾರಿ ಮಂಡಿ ಬೆಲೆಯಲ್ಲಿಯೇ ತಾಜಾ ತರಕಾರಿಗಳನ್ನು ಡೋರ್ ಸ್ಟೆಪ್‌ಗೆ ಪಡೆಯಲು ಆರ್ಡರ್ ಮಾಡಿ.
87478 97209

**ನೂತನ ಹೋಟೆಲ್ ಪ್ರಾರಂಭ**
ಪ್ರಮೋದ್ ಬಾರ್ & ರೆಸ್ಟೋರೆಂಟ್, ಶಾಮನೂರು ರಸ್ತೆ, ದಾವಣಗೆರೆಯಲ್ಲಿ ನೂತನ ಹೋಟೆಲ್ ಪ್ರಾರಂಭವಾಗಿದೆ ಮತ್ತು ಪಾರ್ಸಲ್ ವ್ಯವಸ್ಥೆ ಇರುತ್ತದೆ.
73534 89791
76248 61402

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**LADY TEACHERS REQUIRED**
B.Sc B.Ed (PCM), B.A B.Ed (ENGLISH), D.Ed-03, Clerk - B. Com with Computer Knowledge
Contact Immedietely
95356 10817
88920 07561

**WANTED LADY TEACHERS**
B.Sc. B.Ed. (CBZ)-03
B.Sc. B.Ed. (PCM)-03
B.A., B.Ed. (English)-03
M. : 94492 66133

**WANTED TEACHERS**
B.Sc., B.Ed. (CBZ)-2
B.Sc., M.Sc.-2
B.A. B.Ed. (English Major)-2
B.A. B.Ed-3
ACM SCHOOL
Devaraj Urs Layout 'C' Block, 2nd Cross, Davangere.
8970321855, 8296502675

**ಸೈಟು ಪತ್ರಕಳೆದಿದೆ**
ಕುಬೇಂದ್ರ ಕೆ.ಎಸ್. ಎಂಬ ಹೆಸರಿನಲ್ಲಿರುವ ಹೌಸಿಂಗ್ ಬೋರ್ಡ್ KHB ಸೈಟು ನಂ. 3250, 30×40 ಅಳತೆಯ ಸೈಟು ಪತ್ರವು, ದಿನಾಂಕ 21.08.2021 ರಂದು ಸಬ್ ರಿಜಿಸ್ಟರ್ ಆಫೀಸ್ ಹತ್ತಿರ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್ ನಂಬರ್‌ಗೆ ತಿಳಿಸಲು ಕೋರಿದೆ.
96112 43334, 96639 26288

**ಬಾಡಿಗೆಗೆ ಇದೆ**
15 ರೂಂಗಳು ಹಾಗೂ ಊಟದ ಹಾಲ್ (ಹಾಸ್ಟೇಲ್‌ಗೆ ಸೂಕ್ತವಾದ ) ಬಾಡಿಗೆಗೆ ದೊರೆಯುತ್ತದೆ. ಸರಸ್ವತಿ ಬಡಾವಣೆ ಕೆನರಾಬ್ಯಾಂಕ್ ಹತ್ತಿರ ನಿಟುವಳ್ಳಿ. ದಾವಣಗೆರೆ. ಸಂಪರ್ಕಿಸಿ
81055 42689

**ಹೊಸ ಮನೆ ಮಾರಾಟಕ್ಕಿದೆ**
ಸಿದ್ದಗಂಗಾ ಬಡಾವಣೆ, ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗ 30x40 ಅಳತೆಯ ಉತ್ತರಕ್ಕೆ ಮುಖವಿರುವ ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
94489 23785
95359 67499

**HOUSE - TOLET**
2 BHK House 2 BHK Furnished House, 1 BHK and Rooms, Shivakumarswamy Badavane, Davangere
Real Estate Agent.
78927 93994

**ಮನೆ ಬಾಡಿಗೆಗೆ/ಲೀಸ್‌ಗೆ**
2 ಬೆಡ್‌ರೂಮ್ ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ
93410 12022

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30/57+56=1695 ಅಳತೆಯ ನಿವೇಶನ ಮಾರಾಟಕ್ಕಿದೆ. (ದಕ್ಷಿಣ ಮುಖ) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳಿವೆ.
99006 37763

**CRASH COURSE**
For NEET / 2nd PUC
Tuition100% Results with solved notes.
Sinchana Academy
Near Ram and Co Cricle Davangere
90195 80600, 85532 78258

**WANTED LADY STAFF**
B.E.-03, B.Sc.-03
B.Com / M.Com-03
BBM / MBA-03
For Office Work - 02
M. : 94492 66133

**ತಕ್ಷಣ ಆಯುರ್ವೇದ ಆಸ್ಪತ್ರೆ**
ಡಾ॥ ವಿಶ್ವನಾಥ ಬಿ. B.A.M.S.
ಪಾರ್ಶ್ವವಾಯು ಮತ್ತು ಅಸ್ತಮಾ ಆಯುರ್ವೇದ ಚಿಕಿತ್ಸಾ ಕೇಂದ್ರ,
ವಾಣಿ ರೈಸ್‌ಮಿಲ್ ಹಿಂಭಾಗ, ತರಳಬಾಳು ಬಡಾವಣೆ, 8ನೇ ಕ್ರಾಸ್, ದಾವಣಗೆರೆ.
ಫೋ. : 80509 00654

**HOUSE - TO LET**
East faced Double bed room house to let at S.S. Layout " B " Block 3rd main, near Little champs School.
( Vegeterians only)
98456 99806, 95353 60334

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ,
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266

**WANTED**
Lady Telecaller cum Tally Opreter with 3 years experience.
Contact between 1PM to 5PM only
91102 05896

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ ವಯಸ್ಸು 18 ವರ್ಷ ಮೇಲ್ಪಟ್ಟು, ವೇತನ ರೂ.9000 -12,000ವರೆಗೆ ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು. ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್. ಆರ್.ಸಿ ಕಾರ್ಡ್ ಹೊಂದಿರಬೇಕು.
89514 55892, 99023 42040
81500 67146

**URGENTLY REQUIRED in Davanagere**
Part / Full time Job Vacancy
Eligibility - PUC+, 35yrs+.
150yrs Old Co. For Retd / Housewives / Others Davangere
63600 73776

**ಮನೆಗಳು ಲೀಜ್‌ಗೆ/ ಬಾಡಿಗೆಗಿವೆ**
ನಗರದ ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1 & 2ನೇ ಮಹಡಿ, ಪೂರ್ವ ಬಾಗಿಲು ಇರುವ ಮನೆಗಳು ಇವೆ.
97417 46205, 84312 55250
99022 99961

**ಲೀಸ್ 12 ಲಕ್ಷ/ಬಾಡಿಗೆ 13,000**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**SHOP FOR RENT**
Mamas joint Road, 4th main Davangere.
Ground Floor, 2000 sq ft.
2nd Floor, 2000 Sq. ft.
94483 39413, 98445 66415

**VS Paramedical College**
SSLC ಪಾಸ್/PUC ಪಾಸ್/ಫೇಲ್
Course (DHI)
DIPLOMA HEALTH INSPECTOR
ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
9019580600, 8553278258

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
EICHER Tractor Show Room
ITI, Diploma ಅಭ್ಯರ್ಥಿಗಳು ಬೇಕಾಗಿದ್ದಾರೆ. ಡಿ.ಎಲ್ ಮತ್ತು ಬೈಕ್ ಇದ್ದವರಿಗೆ ಆದ್ಯತೆ.
ಶಾರದಾ ಆಟೋಸ್ ದಾವಣಗೆರೆ.
sharadaautosdavanagere@gmail.com
63646 76457

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628

**ವಾರದ ಚೀಟಿ ಪ್ರಾರಂಭ**
ರೂ.1 ಲಕ್ಷದ ಚೀಟಿ ಪ್ರಾರಂಭ
50 ವಾರಗಳು & 50 ಸದಸ್ಯರು
2000/- ರೂ ಕಂತು ಮಾತ್ರ,
ಸ್ಕಂದ ಚಿಟ್ ಫಂಡ್ಸ್ (ರಿ)
84531 61869

**WANTED**
PACKING LADIES - 20
ಪ್ಯಾಕಿಂಗ್ ಕೆಲಸಕ್ಕೆ ಮಹಿಳೆಯರು ವಿದ್ಯಾರ್ಹತೆ ಬೇಕಿಲ್ಲ
MARKETING BOYS-15
ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು
QUL : SSLC, PUC, DEGREE (ANY)
Walk in Interview on Wednesday
Dated 25-08-2021
Between 11am to 5pm
MAHARAJ SOAPS INDUSTRY PVT. LTD.,
No. 768/500, Lokikere Main Road, Near Industrial Area, Davangere- 577 005. Karnataka.
www.shashisoap.com
9945598998,9741262466

# ಚಿನ್ನ-ಬೆಳ್ಳಿ ಅಂಗಡಿಗಳು ಬಂದ್

**(1ನೇ ಪುಟದಿಂದ)** ಬೆಳ್ಳಿ ವರ್ತಕರಿಗೆ ತೊಂದರೆಯಾಗಲಿದೆ ಎಂದು ಅಸೋಸಿಯೇಷನ್‌ನ ಅಧ್ಯಕ್ಷ ಅರುಣಾಚಲ ಎನ್. ರೇವಣಕರ್ ಆಕ್ಷೇಪಿಸಿದರು.

ಕೇಂದ್ರ ಸರ್ಕಾರ ಜೂ.30ಕ್ಕೆ ಅನ್ವಯ ಆಗುವಂತೆ ಹಾಲ್‌ಮಾರ್ಕ್ ಮಾಡಿರುವ ಚಿನ್ನ ಎಷ್ಟಿದೆ ಎಂದು ಘೋಷಿಸಿಕೊಳ್ಳುವಂತೆ ಕರೆ ನೀಡಿದೆ. ಚಿನ್ನ-ಬೆಳ್ಳಿ ವ್ಯಾಪಾರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಈ ನಿರ್ಧಾರ ಸಹಕಾರಿಯಾಗಲಿದೆ. ಹೆಚ್‌ಯುಐಡಿಯನ್ನು ಕಡ್ಡಾಯಗೊಳಿಸಿರುವುದರಿಂದ ಕೆಲ ತಾಂತ್ರಿಕ ತೊಂದರೆಗಳಾಗಲಿವೆ. ಆದ್ದರಿಂದ ತಕ್ಷಣವೇ ಹೆಚ್‌ಯುಐಡಿ ಕಡ್ಡಾಯಗೊಳಿಸುವ ನಿರ್ಧಾರವನ್ನು ವಾಪಾಸ್ ಪಡೆಯಬೇಕೆಂದು ಉಪಾಧ್ಯಕ್ಷ ರಾಜನಹಳ್ಳಿ ಡಿ. ಬದ್ರಿನಾಥ್ ಆಗ್ರಹಿಸಿದರು.

ಮಂಡಿಪೇಟೆಯಲ್ಲಿ ಪ್ರತಿಭಟನೆ ನಡೆಸಿದ ಅಸೋಷಿಯೇಷನ್ ನ ಗೌರವಾಧ್ಯಕ್ಷ ಶಂಕರ್ ಎನ್. ವಿಠ್ಠಲ್‌ಕರ್, ಕಾರ್ಯದರ್ಶಿ ನಲ್ಲೂರ್ ಎಸ್. ರಾಜಕುಮಾರ್, ನಿರ್ದೇಶಕ ಮಂಜುನಾಥ ಆರ್. ವೆರ್ಣೇಕರ್ ಸೇರಿದಂತೆ ಪದಾಧಿಕಾರಿಗಳು, ಸದಸ್ಯರು, ಚಿನ್ನ-ಬೆಳ್ಳಿ ವರ್ತಕರು ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಮುಖೇನ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎಚ್‌ಯುಐಡಿ ಕಡ್ಡಾಯಗೊಳಿಸುವ ನಿರ್ಧಾರವನ್ನು ವಾಪಾಸ್ ಪಡೆಯಬೇಕೆಂದು ಮನವಿ ಸಲ್ಲಿಸಿದರು.

**ಅಂಗಡಿ ಬಂದ್ ಗ್ರಾಹಕರು ವಾಪಸ್:** ಚಿನ್ನ-ಬೆಳ್ಳಿ ಅಂಗಡಿಗಳ ಬಂದ್ ಬಗ್ಗೆ ಮಾಹಿತಿ ಇಲ್ಲದೇ ಚಿನ್ನಾಭರಣ ಖರೀದಿಗೆ ಬಂದಿದ್ದ ಕೆಲ ಗ್ರಾಹಕರು ಅಂಗಡಿಗಳಿಗೆ ಬೀಗ ಹಾಕಿರುವುದನ್ನು ಕಂಡು ಕಾರಣ ತಿಳಿದು ವಾಪಸ್ ನಡೆದ ಪ್ರಸಂಗವೂ ನಗರದ ವಿವಿಧ ಚಿನ್ನ-ಬೆಳ್ಳಿ ಅಂಗಡಿಗಳ ಬಳಿ ಜರುಗಿದೆ.

# ಹುಮ್ಮಸ್ಸಿನಿಂದ ಆಗಮಿಸಿದ ವಿದ್ಯಾರ್ಥಿಗಳು



**(1ನೇ ಪುಟದಿಂದ)** 4 ಸಾವಿರ ಶಿಕ್ಷಕರುಗಳು ಪಾಠ ಮಾಡಲಿದ್ದು, ಶೇ.90 ರಷ್ಟು ಶಿಕ್ಷಕರು ಪ್ರಥಮ ಡೋಸ್ ಕೋವಿಡ್ ಲಸಿಕೆ ಪಡೆದಿದ್ದಾರೆ. ಶೇ.75ರಷ್ಟು ಶಿಕ್ಷಕರು ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ. ಭೌತಿಕ ತರಗತಿಗಳಿಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಪರ್ಯಾಯವಾಗಿ ಆನ್‌ಲೈನ್ ಪಾಠ ಕೇಳುವ ಅವಕಾಶವನ್ನು ಒದಗಿಸಲಾಗಿದೆ.

**ಅದ್ಧೂರಿ ಪ್ರಾರಂಭೋತ್ಸವ :** ನಿಟ್ಟುವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಅದ್ಧೂರಿಯಾಗಿ ನೆರವೇರಿತು. ಅತಿ ಉತ್ಸಾಹದಿಂದ ಮಕ್ಕಳು ಶಾಲೆಗೆ ಆಗಮಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗದವರು ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿದ್ದರು. ಮಕ್ಕಳನ್ನು ಬ್ಯಾಂಡ್ ವಾದನದೊಂದಿಗೆ ಸ್ವಾಗತಿಸಲಾಯಿತು.

ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ಹಾಗೂ ಡಯಟ್ ಪ್ರಾಚಾರ್ಯ ಲಿಂಗರಾಜ್ ಶಾಲೆಗೆ ಆಗಮಿಸಿ ಪರಿಶೀಲಿಸಿದರು. ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಉಮಾ ಪ್ರಕಾಶ್ ಹಾಗೂ ಕಾಂಗ್ರೆಸ್ ಮುಖಂಡ ಹುಲ್ಲುಮನೆ ಗಣೇಶ್ ಸಹ ಶಾಲೆಗೆ ಆಗಮಿಸಿ ಸಿಹಿ ನೀಡುವ ಮೂಲಕ ಮಕ್ಕಳನ್ನು ಸ್ವಾಗತಿಸಿದರು. ಶೇ.62ರಷ್ಟು ಮಕ್ಕಳು ತರಗತಿಗಳಿಗೆ ಹಾಜರಾಗಿದ್ದರು.

ಹುಲ್ಲುಮನೆ ಗಣೇಶ್ ಅವರು ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕಗಳನ್ನು ನೀಡಿದರು. ಶಾಲೆಯ ಗಣಿತ ಶಿಕ್ಷಕ ಜಯಪ್ಪನವರು ತಾವೇ ತಯಾರಿಸಿದ ಮೊಬೈಲ್ ಸ್ಟ್ಯಾಂಡ್ ಗಳನ್ನು ಮಕ್ಕಳಿಗೆ ಉಪ ನಿರ್ದೇಶಕರಿಂದ ಕೊಡಿಸಿದರು. ಉಮಾ ಪ್ರಕಾಶ್ ಮಕ್ಕಳಿಗೆ ಶಬ್ದಕೋಶ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಶಿಕ್ಷಕ ಎಂ. ಸುರೇಶ್ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಶಿವರುದ್ರಪ್ಪ, ರಾಜು, ಕೆ.ಚಂದ್ರಪ್ಪ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಚಂದ್ರಪ್ಪ ಹಾಗೂ ಸಿಬ್ಬಂದಿ ವರ್ಗದವರು, ಪೋಷಕರು ಇತರರು ಭಾಗವಹಿಸಿದ್ದರು. ಶಿಕ್ಷಕ ಕೆ.ಟಿ. ಜಯಪ್ಪ ಕಾರ್ಯಕ್ರಮ ನಿರೂಪಿಸಿದರು.


## ಹರಪನಹಳ್ಳಿ ಶ್ರೀ ವೆಂಕಟರಮಣಸ್ವಾಮಿ ಪರ್ಮನೆಂಟ್ ಭಂಡಾರ ನಿಧಿ ಲಿ.,
ಹರಪನಹಳ್ಳಿ, ವಿಜಯನಗರ ಜಿಲ್ಲೆ, ದೂರವಾಣಿ ಸಂಖ್ಯೆ; 08398-280215

**ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ಮೀಟಿಂಗ್ ನೋಟಿಸು**

**ಮಾನ್ಯ ಸರ್ವ ಸದಸ್ಯರ ಗಮನಕ್ಕೆ**

ಸಂಸ್ಥೆಯ 31.03.2021ಕ್ಕೆ ಮುಗಿದಿರುವ ಕಂಪನಿಯ ವಾರ್ಷಿಕ ವರದಿಯ ಬಗ್ಗೆ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿ.:13.09.2021 ರ ಸೋಮವಾರ ಮಧ್ಯಾಹ್ನ 2-00 ಗಂಟೆಗೆ ಸರಿಯಾಗಿ ಕಂಪನಿಯ ನೋಂದಾಯಿತ ಕಛೇರಿಯ ಸಭಾ ಭವನದಲ್ಲಿ ಕರೆಯಲಾಗಿದೆ.

**ವಿ.ಸೂ: ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು ಕಳುಹಿಸಲಾಗಿದ್ದು, ತಲುಪದಿದ್ದವರು ಕಛೇರಿಯಲ್ಲಿ ಭೇಟಿ ಮಾಡಿ ನೋಟಿಸನ್ನು ಪಡೆಯಬಹುದು. ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಭೆಗೆ ಆಗಮಿಸಲು ವಿನಂತಿ.**

**ಸ್ಥಳ: ಹರಪನಹಳ್ಳಿ**
**ದಿನಾಂಕ : 20.08.2021**

**ನಿರ್ದೇಶಕರುಗಳ ಅಪ್ಪಣೆ ಮೇರೆಗೆ**
**ಸಹಿ/- ಟಿ. ವ್ಯಾಸರಾಜ್, ಛೇರ್ಮನ್**

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಕುಮಾರಿ **ಸಿರಿಗೌರಿ ಬಿನ್ ಆರ್. ರಮೇಶ್** ವಾಸ #1963/13-14, 'ಬಸವಧಾಮ' 8ನೇ ಮುಖ್ಯ ರಸ್ತೆ, ಎಸ್.ಎಸ್. ಲೇಔಟ್ 'ಎ' ಬ್ಲಾಕ್, ದಾವಣಗೆರೆ ಮೊಬೈಲ್ ಸಂಖ್ಯೆ: 96862 66115, ಅವರ ಪರವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು **ಲೇ. ಜಿ.ಎಸ್. ಚನ್ನಬಸಪ್ಪ** ಇವರ ಮಕ್ಕಳಾದ **ಶ್ರೀ ಟಿ.ಸಿ. ಸಿದ್ದೇಶ್** ಮತ್ತು **ಶ್ರೀ ಟಿ.ಸಿ. ಮಂಜುನಾಥ,** ವಾಸ: #1675/5-6, 1ನೇ ಮಹಡಿ, ರಂಗನಾಥ ಬಡಾವಣೆ, ವಿದ್ಯಾನಗರ, ದಾವಣಗೆರೆ ಇವರಿಂದ ಖರೀದಿಗೆ ಪಡೆದುಕೊಳ್ಳಲು ತೀರ್ಮಾನಿಸಿದ್ದು, ಈ ಬಗ್ಗೆ ಯಾವುದೇ ಸಾರ್ವಜನಿಕರಿಗೆ ಅಥವಾ ಷೆಡ್ಯೂಲ್ ಆಸ್ತಿಗೆ ಯಾವುದೇ ರೀತಿಯ ಹಕ್ಕುವುಳ್ಳವರಿದ್ದಲ್ಲಿ ಸೂಕ್ತ ದಾಖಲೆ, ಪುರಾವೆಗಳೊಂದಿಗೆ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ನಮ್ಮನ್ನಾಗಲೀ ಈ ಪ್ರಕಟಣೆ ಪ್ರಕಟಗೊಂಡ 7 ದಿನಗಳೊಳಗಾಗಿ ಖುದ್ದು ಸಂಪರ್ಕಿಸಿತಕ್ಕದ್ದು. ಒಂದು ವೇಳೆ 7 ದಿನಗಳೊಳಗಾಗಿ ಯಾರೇ ಆಗಲೀ ಸಂಪರ್ಕಿಸದಿದ್ದಲ್ಲಿ, ನಮ್ಮ ಕಕ್ಷಿದಾರರು ಸದರಿ ಆಸ್ತಿಯಲ್ಲಿ ಬೇರೆ ಯಾವುದೇ ವ್ಯಕ್ತಿಗೆ ಹಕ್ಕು, ಹಿತಾಸಕ್ತಿ ಇರುವುದಿಲ್ಲವೆಂದು ಪರಿಗಣಿಸಿ ತಮ್ಮ ಹೆಸರಿಗೆ ಹಾಲಿ ಮಾಲೀಕರಿಂದ ಖರೀದಿ ಪತ್ರ ಬರೆಯಿಸಿಕೊಳ್ಳುತ್ತಾರೆ.

**ಷೆಡ್ಯೂಲ್**

ದಾವಣಗೆರೆ ಸಿಟಿ, ಶಾಮನೂರು ಗ್ರಾಮದ ರಿ.ಸ.ನಂ.220/8 ಮತ್ತು 220/20ರಲ್ಲಿ ಮಾಡಿರುವ ಲೇಔಟ್‌ನಲ್ಲಿ ಬರತಕ್ಕ ಸೈಟ್ ನಂ.8 ಡೋರ್ ನಂ.220/8 ವಿಸ್ತೀರ್ಣ 40x 62+62.5/2 ಅಡಿವುಳ್ಳ ಸೊತ್ತಿಗೆ ಚಕ್ಕುಬಂದಿ: **ಪೂರ್ವ : 12 ಮೀಟರ್ ರಸ್ತೆ**
**ಪಶ್ಚಿಮ: ಸ.ನಂ 220/1 ರ ಪ್ರದೇಶ ಉತ್ತರ : ಸೈಟ್ ನಂ.7 ದಕ್ಷಿಣ: ಸೈಟ್ ನಂ.9**

**ಎ.ಎಂ ಹೆಗಡೆ,** ಬಿ.ಕಾಂ., ಎಲ್‌ಎಲ್.ಬಿ. ವಕೀಲರು
# 612/1, 7ನೇ ಮೇನ್, ಪಿ.ಜೆ. ಬಡಾವಣೆ,
ದಾವಣಗೆರೆ-577002., **ಮೊ: 94483 05888**


# ಪೌರಕಾರ್ಮಿಕರು ಪ್ರಾತಃಸ್ಮರಣೀಯರು

**(1ನೇ ಪುಟದಿಂದ)** ಮತ್ತು ನಗರ ಮಹಿಳಾ ಘಟಕಗಳ ಸಂಯುಕ್ತಾಶ್ರಯದಲ್ಲಿ ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಕೊರೊನಾ ವಾರಿಯರ್ಸ್ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮಗೆ ಸೇವೆ ಮಾಡಲು ಸಾಧ್ಯವಾಗದಿದ್ದರೂ, ಸಮಾಜದಲ್ಲಿ ನಿಸ್ವಾರ್ಥ ಸೇವೆ ಮಾಡುತ್ತಿರುವ ಸಾಧಕರನ್ನು ಗುರುತಿಸುತ್ತಿರುವುದು ಕೂಡ ಪುಣ್ಯದ ಕೆಲಸವಾಗಿದೆ. ಪಂಚಮಸಾಲಿ ಸಮಾಜ ಪ್ರತಿ ವರ್ಷ ಸಾಮೂಹಿಕ ವಿವಾಹ ಮಾಡುವ ಮೂಲಕ ಸಮಾಜದ ಬಡ ಜನರಿಗೆ ನೆರವಾಗುತ್ತಾ ಬಂದಿದೆ. ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲು ಸಾಧ್ಯವಾಗಿಲ್ಲ. ಇದುವರೆಗೂ 1080 ಜೋಡಿಗಳು ವಿವಾಹ ಮಹೋತ್ಸವದಲ್ಲಿ ದಾಂಪತ್ಯಕ್ಕೆ ಕಾಲಿರಿಸಿದ್ದಾರೆ. ಅವರಿಗೆ ಸರ್ಕಾರದಿಂದ ಒಟ್ಟು 1 ಕೋಟಿ ಸಹಾಯ ಧನವನ್ನು ಮಂಜೂರು ಮಾಡಿಸಿ ಕೊಡಲಾಗಿದೆ ಎಂದು ಮಾಹಿತಿ ನೀಡಿದರು.

ಪಾಲಿಕೆ ಮಾಜಿ ಉಪ ಮಹಾಪೌರರಾದ ಬಿ. ಲೋಕೇಶ್ ಮಾತನಾಡಿ, ಕೊರೊನಾ ಮಹಾಮಾರಿಯನ್ನು ತೊಲಗಿಸಲು ಸೇನಾನಿಗಳಂತೆ, ಜೀವದ ಹಂಗು ತೊರೆದು ರೋಗಿಗಳನ್ನು ಆರೈಕೆ ಮಾಡಿದ ವೈದ್ಯರು, ದಾದಿಯರು, ಸಿಬ್ಬಂದಿ, ಪೊಲೀಸರು, ಪೌರ ಕಾರ್ಮಿಕರ ಸೇವೆಯನ್ನು ಯಾರೂ ಮರೆಯುವಂತಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರ ವಾಸಿಗಳು ನೆಮ್ಮದಿ ಜೀವನ ನಡೆಸಲು ಪೌರಕಾರ್ಮಿಕರ ಪಾತ್ರ ಬಹುಮುಖ್ಯ. ಆದ್ದರಿಂದ ಇವರನ್ನು ಪ್ರಾತ:ಸ್ಮರಣೀಯರೆಂದು ಕರೆಯುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು.

ಡಾ. ಎ.ಎಂ. ಶಿವಕುಮಾರ್ ಮಾತನಾಡಿ, ರಕ್ತದಾನ ಮಹಾದಾನವಾಗಿದ್ದು, ಆರೋಗ್ಯವಂತ ಯುವ ಜನರು ರಕ್ತ ಕೊಡುವುದರಿಂದ ಸಾವು-ಬದುಕಿನ ಮಧ್ಯೆ ಹೋರಾಟ ನಡೆಸುತ್ತಿರುವ ರೋಗಿಗಳ ಜೀವ ಉಳಿಸಲು ಸಹಕಾರಿಯಾಗುತ್ತದೆ ಎಂದರು.

ಡಾ.ಎ.ಕೆ. ರುದ್ರಮುನಿ ಮಾತನಾಡಿದರು. ಜ್ಯೋತಿ ಗ್ಯಾಸ್ ಏಜೆನ್ಸೀಸ್ ಮಾಲೀಕರಾದ ಅಂದನೂರು ಆನಂದ್, ಸಮಾಜದ ಮುಖಂಡರಾದ ಕಂಚಿಕೆರೆ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು. ನಗರ ಘಟಕದ ಅಧ್ಯಕ್ಷ ಶಿವಶಂಕರ್ ಕೈದಾಳೆ ಅಧ್ಯಕ್ಷತೆ ವಹಿಸಿದ್ದರು.

ಮಮತಾ ಶ್ರೀಧರ್, ಕೊಟ್ರಮ್ಮ ಮುರುಗೇಶ್ ಪ್ರಾರ್ಥಿಸಿದರು. ನಗರ ಯುವ ಘಟಕದ ಅಧ್ಯಕ್ಷ ಬಾದಾಮಿ ಜಯ್ಯಣ್ಣ ಸ್ವಾಗತಿಸಿದರು. ಶಿವಕುಮಾರ್ ಹೊಸಕೆರೆ ನಿರೂಪಿಸಿದರು. ನಗರ ಮಹಿಳಾ ಘಟಕದ ಅಧ್ಯಕ್ಷರಾದ ವಾಣಿ ಗುರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಷ್ಮಾ ಪಾಟೀಲ್ ವಂದಿಸಿದರು.

# ಹಿಡಿದು ಅನಿಲ ಮಾರ್ಗದವರೆಗೆ 'ನಗದೀಕರಣ'

**(1ನೇ ಪುಟದಿಂದ)** ಈ ಯೋಜನೆಯ ಅನ್ವಯ ಖಾಸಗಿ ಕಂಪನಿಗಳು ನಿಶ್ಚಿತ ಆದಾಯದ ಆಧಾರದ ಮೇಲೆ ಯೋಜನೆಗಳ ಮೇಲೆ ಹೂಡಿಕೆ ಮಾಡಲಿವೆ. ನಿಶ್ಚಿತ ಅವಧಿಯ ನಂತರ ಆಸ್ತಿಗಳನ್ನು ಸರ್ಕಾರಕ್ಕೆ ಮರಳಿಸಲಿವೆ. ಗೋದಾಮು ಹಾಗೂ ಕ್ರೀಡಾಂಗಣಗಳಂತಹ ಆಸ್ತಿಗಳನ್ನು ದೀರ್ಘಾವಧಿಯವರೆಗೆ ಗುತ್ತಿಗೆ ಮೇಲೆ ನೀಡಲಾಗುವುದು.

ಈ ಯೋಜನೆಯಿಂದಾಗಿ ರಾಷ್ಟ್ರೀಯ ಮೂಲಭೂತ ಸೌಲಭ್ಯ ಮಾರ್ಗ ಮುಂದಿನ ಹಂತಕ್ಕೆ ತೆರಳಲಿದೆ. ಇದರಿಂದಾಗಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ ಬಲವಾಗಲಿದೆ ಎಂದು ಸೀತಾರಾಮ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಂದಿನ ನಾಲ್ಕು ವರ್ಷಗಳಲ್ಲಿ 6 ಲಕ್ಷ ಕೋಟಿ ರೂ.ಗಳ ನಗದೀಕರಣಕ್ಕೆ ಕೇಂದ್ರ ಸರ್ಕಾರ ಯೋಜಿಸಿದೆ. ರಾಷ್ಟ್ರೀಯ ಮೂಲಭೂತ ಸೌಲಭ್ಯ ಯೋಜನೆಗಾಗಿ ಸರ್ಕಾರ 111 ಲಕ್ಷ ಕೋಟಿ ರೂ.ಗಳ ಹೂಡಿಕೆಗೆ ಉದ್ದೇಶಿಸಿದೆ. ನಗದೀಕರಣದ ಮೂಲಕ ಇದರ ಶೇ.5.4ರಷ್ಟು ಬರಲಿದೆ.

ಈ ಆಸ್ತಿಗಳನ್ನು ಖಾಸಗಿಯವರಿಗೆ ಮಾರಲಾಗಿದೆ ಎಂದು ಭಾವಿಸಬಾರದು. ಇವುಗಳ ಮಾಲೀಕತ್ವ ಸರ್ಕಾರದ ಬಳಿಯೇ ಇರಲಿದೆ. ರಸ್ತೆ ಹಾಗೂ ರೈಲ್ವೆ ವಲಯಗಳ ಮೂಲಕ ನಗದೀಕರಣ ಅರ್ಧ ಭಾಗ ಬರಲಿದೆ ಎಂದು ಸೀತಾರಾಮನ್ ಹೇಳಿದ್ದಾರೆ.

ಹಾಲಿ ಇರುವ 26,700 ಕಿಮೀ.ಗಳ ಹೆದ್ದಾರಿ ಹಾಗೂ ನೂತನ ರಸ್ತೆಗಳ ನಗದೀಕರಣದ ಮೂಲಕ 1.6 ಲಕ್ಷ ಕೋಟಿ ರೂ. ಬರಲಿದೆ. 400 ರೈಲ್ವೆ ನಿಲ್ದಾಣ, 90 ಪ್ರಯಾಣಿಕರ ರೈಲು, 741 ಕಿ.ಮೀ.ಗಳ ಕೊಂಕಣ್ ರೈಲ್ವೆ ಹಾಗೂ 15 ರೈಲ್ವೆ ಕ್ರೀಡಾಂಗಣ ಮತ್ತು ಬಡಾವಣೆಗಳನ್ನು 1.2 ಲಕ್ಷ ಕೋಟಿ ರೂ.ಗಳಿಗೆ ನಗದೀಕರಿಸಲಾಗುವುದು.

28,608 ಕಿ.ಮೀ. ಉದ್ದದ ವಿದ್ಯುತ್ ವಿತರಣಾ ಜಾಲದ ಮೂಲಕ 45,200 ಕೋಟಿ ರೂ. ಹಾಗೂ 6 ಜಿ. ಡಬ್ಲ್ಯೂ. ವಿದ್ಯುತ್ ಉತ್ಪಾದನಾ ಘಟಕದ ಮೂಲಕ 3,98,732 ಕೋಟಿ ರೂ. ಬರಲಿದೆ ಎಂದು ಅಂದಾಜಿಸಲಾಗಿದೆ.

ಟೆಲಿಕಾಂ ವಲಯದಲ್ಲಿ 2.86 ಲಕ್ಷ ಕಿ.ಮೀ. ಭಾರತ್ ನೆಟ್ ಫೈಬರ್ ಹಾಗೂ 14,917 ಟವರ್‌ಗಳ ಮೂಲಕ 35,100 ಕೋಟಿ ರೂ. ಬರಲಿದೆ. ಗೋದಾಮು ಹಾಗೂ ಕಲ್ಲಿದ್ದಲು ಗಣಿ ಮೂಲಕ ತಲಾ 29 ಸಾವಿರ ಕೋಟಿ ರೂ. ಬರಲಿದೆ ಎಂದು ಅಂದಾಜಿಸಲಾಗಿದೆ.

8,154 ಕಿ.ಮೀ.ಗಳ ನೈಸರ್ಗಿಕ ಅನಿಲ ಮಾರ್ಗದ ಮೂಲಕ 24,462 ಕೋಟಿ ರೂ. ಹಾಗೂ 3,930 ಕಿ.ಮೀ. ಪೈಪ್‌ಲೈನ್ ಮೂಲಕ 22,504 ಕೋಟಿ ರೂ. ಬರಲಿದೆ ಎಂದು ಅಂದಾಜಿಸಲಾಗಿದೆ. ವಿಮಾನ ನಿಲ್ದಾಣಗಳ ಮೂಲಕ 20,782 ಕೋಟಿ ರೂ. ಹಾಗೂ ಬಂದರಿನ ಮೂಲಕ 12,828 ಕೋಟಿ ರೂ. ಬರುವ ಅಂದಾಜಿದೆ.

## ಸೆ.15ರ ಗಡುವು

**(1ನೇ ಪುಟದಿಂದ)** ಬಿಡುಗಡೆ ಮಾಡಿರುವ ಆದಾಯ ತೆರಿಗೆ ಇಲಾಖೆ, ತೆರಿಗೆದಾರರು ಎದುರಿಸುತ್ತಿರುವ ಸಮಸ್ಯೆಯನ್ನು ಸೆಪ್ಟೆಂಬರ್ 15ರ ಒಳಗೆ ಬಗೆಹರಿಸುವಂತೆ ತಿಳಿಸಲಾಗಿದೆ ಎಂದು ಹೇಳಿದೆ. ಹಲವಾರು ತೊಡಕುಗಳು ಮುಂದುವರೆದಿರುವ ನಡುವೆ, ಆಗಸ್ಟ್ 21 ಹಾಗೂ 22ರಂದು ಪೋರ್ಟಲ್ ಕಾರ್ಯ ನಿರ್ವಹಿಸಿರಲಿಲ್ಲ. ನಂತರ ವೆಬ್‌ಸೈಟ್ ಮತ್ತೆ ಕಾರ್ಯಾರಂಭ ಮಾಡಿತ್ತು.


## ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06

ನಂ.ದಾಹನಪ್ರಾ:ಆಡಳಿತ:ಸಿಆರ್:–01/2021–22/880
ದಿನಾಂಕ: 23.08.2021

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ಪ್ರಕಟಣೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ವಸತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ, ಕುಂದವಾಡ ಗ್ರಾಮದ ವಿವಿಧ ರಿ.ಸ. ನಂಬರ್‌ಗಳ ಜಮೀನುಗಳನ್ನು ರೈತರಿಂದ ನೇರವಾಗಿ ಖರೀದಿಸಿ ವಸತಿ ಬಡಾವಣೆಯನ್ನು ನಿರ್ಮಾಣ ಮಾಡುವ ಸಂಬಂಧ ಸರ್ಕಾರಕ್ಕೆ ಜಮೀನು ಖರೀದಿಗೆ ಮಂಜೂರಾತಿ ಕೋರಿ ಪ್ರಸ್ತಾವನೆ ಕಳುಹಿಸಿದ್ದು, ಸರ್ಕಾರದಿಂದ ಜಮೀನು ಖರೀದಿಗೆ ಸಂಬಂಧಿಸಿದಂತೆ ನಿವೇಶನ ಹಂಚಿಕೆ ಮಾಡುವ ಕುರಿತು ಬೇಡಿಕೆ ಸಮೀಕ್ಷೆ ವರದಿ ಕಳುಹಿಸುವಂತೆ ನಿರ್ದೇಶನ ನೀಡಿರುವ ರೀತ್ಯಾ ಬೇಡಿಕೆ ಸಮೀಕ್ಷೆ ಕುರಿತು ದಿನಾಂಕ: 11.08.2021 ರಿಂದ 26.08.2021ರವೆಗೆ ಅರ್ಜಿ ನೋಂದಣಿ ಶುಲ್ಕ ಸಲ್ಲಿಸುವ ದಿನಾಂಕ ನಿಗಧಿಪಡಿಸಲಾಗಿರುತ್ತದೆ. ಅಂತಿಮ ದಿನಾಂಕದವರೆಗೆ ಬಂದಂತ ಬೇಡಿಕೆ ಸಮೀಕ್ಷೆಯ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ ನಂತರ ಭೂಮಿ ಖರೀದಿಗೆ ಮಂಜೂರಾತಿ ನೀಡಿದ ನಂತರ ಮುಂದಿನ ಬೆಳವಣಿಗೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನೇರ ಖರೀದಿ ಯೋಜನೆಯಡಿ ಭೂಮಿ ಖರೀದಿಸಿ ಬಡಾವಣೆ ಅಭಿವೃದ್ಧಿ ಪಡಿಸುವ ಸಂಬಂಧದಲ್ಲಿ ಹಾಗೂ ಅಭಿವೃದ್ಧಿಸಲು ಉದ್ದೇಶಿಸಿರುವ ಬಡಾವಣೆಯಲ್ಲಿ ಎಲ್ಲಾ ನಾಗರೀಕ ಸೌಕರ್ಯಗಳ ಕಾಮಗಾರಿ ಪೂರ್ಣಗೊಂಡ ನಂತರ ನಿವೇಶನ ಹಂಚಿಕೆ ಕುರಿತು, ಅರ್ಜಿಗಳನ್ನು ಪ್ರವರ್ಗವಾರು ಆಹ್ವಾನಿಸಲಾಗುವುದು. ಅರ್ಜಿಗಳನ್ನು ಆಹ್ವಾನಿಸುವ ಸಂದರ್ಭದಲ್ಲಿ ಈಗ ಬೇಡಿಕೆ ಸಮೀಕ್ಷೆಯಲ್ಲಿ ನೋಂದಣಿ ಮಾಡಿಕೊಳ್ಳಲಾದ ಅರ್ಜಿದಾರರಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ ಎಂಬುದಾಗಿ ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಹಾಗೂ ಈಗ ಬೇಡಿಕೆ ಸಮೀಕ್ಷೆ ನೋಂದಣಿ ಮಾಡಿಸಿಕೊಳ್ಳುತ್ತಿದ್ದು, ಸಾರ್ವಜನಿಕರು ಪ್ರಾಧಿಕಾರದ ವತಿಯಿಂದ ಉಚಿತವಾಗಿ ನಿವೇಶನ ನೀಡುತ್ತೇವೆ ಎಂದು ತಪ್ಪಾಗಿ ಭಾವಿಸಬಾರದು. ಕಾರಣ ಪ್ರಾಧಿಕಾರವು ಖರೀದಿಸಿದ ಭೂಮಿ ವೆಚ್ಚ ಮತ್ತು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಬಡಾವಣೆಯಯಲ್ಲಿನ ಎಲ್ಲಾ ಮೂಲಭೂತ ಸೌಕರ್ಯ ಅಭಿವೃದ್ಧಿ ವೆಚ್ಚ ಅಂದರೆ ಭೂಮಿ ಖರೀದಿ ವೆಚ್ಚ,ಅಭಿವೃದ್ಧಿ ವೆಚ್ಚವನ್ನು ಸೇರಿಸಿಕೊಂಡು ತದ ನಂತರ ನಿವೇಶನದ ದರವನ್ನು ನಿಗಧಿ ಪಡಿಸಲಾಗುತ್ತದೆ ಎಂಬುದಾಗಿ ಮತ್ತೊಮ್ಮೆ ಈ ಮೂಲಕ ತಿಳಿಯಪಡಿಸಿದೆ.

ವಾಸಾಇ/ದಾವಣಗೆರೆ/ 330/ಎಂಸಿಎ/2021–22

ಸಹಿ/– **ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.**


## ಗುರುರಾಯರ ಆರಾಧನೆ

ನಮಿಸುವೆ ನಮಿಸುವೆ ಗುರು ರಾಘವೇಂದ್ರ
ನಮಿಸುವೆ ರಕ್ಷಿಸಿರಿ ಯತಿ ರಾಘವೇಂದ್ರ
ಅಮಾನುಷ ಶಕ್ತಿಗಳ ಆಗರ ರಾಘವೇಂದ್ರ
ಸಮಾನವಿಲ್ಲದ ಕರುಣಿ ಶ್ರೀ ರಾಘವೇಂದ್ರ

ಕಾಮಧೇನು ಕಲ್ಪವೃಕ್ಷ ನೀವೆ ನಮಗೆ
ಕಾಮಿತಾರ್ಥವ ಕೊಟ್ಟು ಕಾಪಾಡುವರೆ
ರಾಮಪಾದ ಸೇವೆಯಲಿ ನಿರತರಾದವರೆ
ಸಾಮಗಾನ ವೀಣೆಯಲಿ ನುಡಿಸುವರೆ

ಮಂತ್ರಾಲಯದಲ್ಲಿ ನೆಲೆನಿಂತ ಗುರುವೆ
ಮಂತ್ರಾಕ್ಷತೆ ಕೊಟ್ಟು ಅನುಗ್ರಹಿಸುವರೆ
ಮಂತ್ರ ಸ್ತೋತ್ರ ಪಠಣೆಗೆ ಒಲಿಯುವವರೆ
ಅಂತರಂಗದ ಭಕ್ತರ ಜೊತೆಗಿರುವವರೆ

ಪ್ರಹ್ಲಾದ ರೂಪದಿಂದ ಕನಕಾಭಿಷಿಕ್ತರೆ
ಆಹ್ಲಾದ ದಾಯಕರೆ ಶ್ರೀ ವ್ಯಾಸರಾಯರೆ
ಮಹಾಮಹಿಮೆಗಳ ತೋರ್ದ ಗುರುರಾಯರೆ
ಮಹೋನ್ನತ ಸಿರಿಹರಿಗೆ ಅತಿಪ್ರಿಯರೆ

**- ಶ್ರೀ ಕೃಷ್ಣಾರ್ಪಣಮಸ್ತು, ರೂಪಶ್ರೀ ಶಶಿಕಾಂತ್**

# ರಾಷ್ಟ್ರೀಯ ಶಿಕ್ಷಣ ನೀತಿಗೆ ಚಾಲನೆ

**(1ನೇ ಪುಟದಿಂದ)** ಮುಖ್ಯಮಂತ್ರಿ ಬೊಮ್ಮಾಯಿ ಅವರು ಇದೇ ವೇದಿಕೆಯಲ್ಲಿ ಚಾಲನೆ ನೀಡಿದರು.

ಇಡೀ ದೇಶದಲ್ಲಿಯೇ ಶಿಕ್ಷಣ ನೀತಿಯನ್ನು ಎಲ್ಲರಿಗಿಂತ ಮೊದಲೇ ಜಾರಿ ಮಾಡುತ್ತಿರುವ ನಮ್ಮ ರಾಜ್ಯವು, ಮುಂಬರುವ ದಿನಗಳಲ್ಲಿ ಡಿಜಿಟಲ್ ಕಲಿಕೆಯನ್ನು ಉತ್ತೇಜಿಸಲು, ಅಂತರ್ಜಾಲದಿಂದ ಪ್ರತಿ ಹಳ್ಳಿಯನ್ನು ಬೆಸೆಯಲು ಕಟಿಬದ್ಧವಾಗಿದ್ದು, ಇದಕ್ಕಾಗಿ ಹೊಸ ಡಿಜಿಟಲ್ ಪಾಲಿಸಿ ಜಾರಿಗೆ ತರುವುದಾಗಿ ಘೋಷಣೆ ಮಾಡಿದರು.

ಮೊದಲಿನಿಂದಲೂ ಕರ್ನಾಟಕವು ಶೈಕ್ಷಣಿಕವಾಗಿ ಅದರಲ್ಲೂ ವೈಜ್ಞಾನಿಕ ಅಧ್ಯಯನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ಹೀಗಾಗಿ ನೂತನ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಯನ್ನು ಜಾರಿಗೆ ತರಲಾಗುವುದು. ಈ ಮೂಲಕ ವೈಜ್ಞಾನಿಕ ಸಂಶೋಧನೆ, ಅಭಿವೃದ್ಧಿಗೆ ಅತಿ ಹೆಚ್ಚು ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ರಾಜ್ಯ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆ ರೂಪಿಸಿರುವ ಮಹತ್ವಾಕಾಂಕ್ಷಿ ಯೋಜನೆಯಾದ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಎಂಬ ವಿದ್ಯಾರ್ಥಿಗಳ ದಾಖಲಾತಿ ವ್ಯವಸ್ಥೆಗೂ ಇದೇ ವೇಳೆ ಮುಖ್ಯಮಂತ್ರಿ ಚಾಲನೆ ನೀಡಿದರು.

ಇವತ್ತಿನಿಂದಲೇ ರಾಜ್ಯದಲ್ಲಿ ಅಧಿಕೃತವಾಗಿ ಶಿಕ್ಷಣ ನೀತಿ ಜಾರಿಗೆ ಬಂದಿದ್ದು, ಇದಕ್ಕೆ ಪೂರಕವಾಗಿ ಸರಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲೂ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಮೂಲಕವೇ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ ಸಂದರ್ಭದಲ್ಲಿ ಯಾವುದೇ ಗೊಂದಲ, ಸಮಸ್ಯೆ ಆಗಬಾರದು ಎನ್ನುವ ಕಾರಣಕ್ಕೆ ಕಾಲೇಜು ಶಿಕ್ಷಣ ಇಲಾಖೆ ರೂಪಿಸಿರುವ ಶಿಕ್ಷಣ ನೀತಿಯ ವೆಬ್‌ಸೈಟ್ ಮತ್ತು ಸಹಾಯವಾಣಿಗೆ ಮುಖ್ಯಮಂತ್ರಿಗಳು ಚಾಲನೆ ನೀಡಿದರು. 080-24486666 ಸಂಖ್ಯೆಯನ್ನು ಎಲ್ಲರೂ ಸಂಪರ್ಕ ಮಾಡಬಹುದು.

# ಕೊರೊನಾ ಮೂರನೇ ಅಲೆ ತಪ್ಪದು

**(1ನೇ ಪುಟದಿಂದ)** ಬರಬಹುದು.

ಮೂರನೇ ಪರಿಸ್ಥಿತಿಯಲ್ಲಿ, ಅಕ್ಟೋಬರ್ ಅಂತ್ಯದ ವೇಳೆಗೆ ಪ್ರತಿದಿನ 2 ಲಕ್ಷ ಪಾಸಿಟಿವ್ ಪ್ರಕರಣಗಳು ಬರಬಹುದು ಎಂದು ವರದಿಯಲ್ಲಿ ಹೇಳಲಾಗಿದೆ. ಶೇ.67ರಷ್ಟು ಜನರು ಸೋಂಕು ಇಲ್ಲವೇ ಲಸಿಕೆಯ ಮೂಲಕ ರೋಗ ನಿರೋಧಕತೆ ಪಡೆದು ಕೊಂಡರೆ, ಸಮುದಾಯ ರೋಗ ನಿರೋಧಕತೆ ಸಾಧ್ಯ ವಾಗಲಿದೆ ಎಂದು ಈ ಹಿಂದೆ ವರದಿಯಲ್ಲಿ ತಿಳಿಸಲಾಗಿತ್ತು.

ಆದರೆ, ಆನಂತರದಲ್ಲಿ ಕೊರೊನಾ ವೈರಸ್ ರೂಪಾಂತರಿಯಾಗಿ ಈ ಹಿಂದೆ ಗಳಿಸಿದ ರೋಗ ನಿರೋಧಕತೆಯನ್ನು ಮೀರಿತ್ತು. ಹೀಗಾಗಿ ಸೋಂಕಿತರಿಗೇ ಮತ್ತೆ ಸೋಂಕು ಬಂದಿತ್ತು. ಲಸಿಕೆ ಪಡೆದವರಿಗೂ ಸೋಂಕು ಬಂದಿತ್ತು. ಹೀಗಾಗಿ ಸಮುದಾಯ ರೋಗ ನಿರೋಧಕತೆ ಗಳಿಸಲು ಶೇ.80ರಿಂದ 90ರಷ್ಟು ಜನರಿಗೆ ರೋಗ ನಿರೋಧಕತೆ ಉಂಟಾಗಬೇಕು ಎಂದು ಅಂದಾಜಿಸಲಾಗಿದೆ.

ಹೀಗಾಗಿ ಮೂರನೇ ಅಲೆ ಬರುವಷ್ಟರಲ್ಲಿ ನಮ್ಮ ಆರೋಗ್ಯ ವ್ಯವಸ್ಥೆ ಹಾಗೂ ಲಸಿಕೆ ಪ್ರಮಾಣವನ್ನು ಹೆಚ್ಚಿಸಬೇಕಿದೆ. ಪ್ರತಿನಿತ್ಯ ಆಗುತ್ತಿರುವ ಬೆಳವಣಿಗೆಗಳು ವಿಶ್ವದಾದ್ಯಂತ ಅನಿಶ್ಚಿತತೆ ಸೃಷ್ಟಿಸುತ್ತಿವೆ ಎಂದು ವರದಿಯಲ್ಲಿ ಹೇಳಲಾಗಿದೆ. ಇದುವರೆಗೂ ಕೊರೊನಾ ಸೋಂಕಿಗೆ ಸಿಲುಕಿದ ಮಕ್ಕಳಲ್ಲಿ ರೋಗದ ತೀವ್ರತೆ ಕಡಿಮೆ ಇದೆ. ಇಲ್ಲವೇ ಲಘು ಲಕ್ಷಣಗಳು ಕಂಡು ಬರುತ್ತಿವೆ.

ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿಯ ಪ್ರಕಾರ, ಆಸ್ಪತ್ರೆಗೆ ದಾಖಲಾಗುವ ಶೇ.70ರಷ್ಟು ಮಕ್ಕಳಲ್ಲಿ ಸಹ ಅಸ್ವಸ್ಥತೆ ಇದೆ ಇಲ್ಲವೇ ರೋಗ ನಿರೋಧಕತೆ ತೀರಾ ಕಡಿಮೆ ಇದೆ. ಕೊರೊನಾ ನಂತರ ಮಕ್ಕಳಲ್ಲಿ ಅಪರೂಪಕ್ಕೆ ಮಿಸ್ಸಿಯಂತಹ ಪ್ರಕರಣಗಳು ಕಂಡು ಬರುತ್ತವೆ ಎಂದು ವರದಿಯಲ್ಲಿ ಹೇಳಲಾಗಿದೆ.

2015ರಲ್ಲಿ ಸಂಸತ್ತಿನ ಸ್ಥಾಯಿ ಸಮಿತಿಯ ವರದಿಯ ಪ್ರಕಾರ, ದೇಶದಲ್ಲಿ ಮಕ್ಕಳ ತಜ್ಞರ ಶೇ.82ರಷ್ಟು ಕೊರತೆ ಇದೆ.

ಪಂಡಿತ್ ದೀನ್‌ದಯಾಳ್ ಎನರ್ಜಿ ಯೂನಿವರ್ಸಿಟಿ ಹಾಗೂ ನಿರ್ಮಾ ಯೂನಿವರ್ಸಿಟಿ ವರದಿಯ ಪ್ರಕಾರ, ಲಸಿಕೆ ನೀಡುವ ಪ್ರಮಾಣ ಹೆಚ್ಚಾಗದೇ ಹೋದರೆ, ಮೂರನೇ ಅಲೆ ಉತ್ತುಂಗದಲ್ಲಿ ಪ್ರತಿದಿನ 6 ಲಕ್ಷದಷ್ಟು ಪ್ರಕರಣಗಳು ಕಂಡು ಬರಲಿವೆ.

# ತೋಳಹುಣಸೆಯಲ್ಲಿ ಭಾರೀ ಮಳೆಗೆ ಮನೆಗಳಿಗೆ ನುಗ್ಗಿದ ನೀರು

ದಾವಣಗೆರೆ, ಆ.23- ನಿನ್ನೆ ಸಂಜೆ ಸುರಿದ ಮಳೆಯಿಂದಾಗಿ ತೋಳಹುಣಸೆ, ಸುತ್ತಮುತ್ತಲಿನ ಗ್ರಾಮಗಳ ಮನೆಗಳಿಗೆ ನೀರು ನುಗ್ಗಿದ ಕಾರಣ, ಮನೆಗಳಲ್ಲಿ ಸಂಗ್ರಹಿಸಿಟ್ಟಿದ್ದ ಆಹಾರ ಧಾನ್ಯಗಳು ನೀರಿನಲ್ಲಿ ಕೊಚ್ಚಿಹೋಗಿವೆ. ಜನ, ಜಾನುವಾರುಗಳು ರಾತ್ರಿಯಿಡೀ ಜಾಗರಣೆ ಮಾಡುವಂತಾಗಿದೆ.

ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ರಾತ್ರಿ ಭೇಟಿ ನೀಡಿದ್ದರು. ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಗಳು, ಗ್ರಾಮಸ್ಥರ ಸಹಾಯದೊಂದಿಗೆ ನೀರು ನುಗ್ಗಿದ ಪ್ರದೇಶಗಳಿಂದ ಮೋಟಾರ್ ಮೂಲಕ ಮನೆಯೊಳಗೆ ನುಗ್ಗಿದ್ದ ನೀರನ್ನು ಹೊರಗೆ ಹಾಕಿಸುವ ಪ್ರಯತ್ನ ಮಾಡಿದರು.

ಈ ಗ್ರಾಮಗಳ ಸಮೀಪದಲ್ಲಿಯೇ ನಕಾಶೆ ಹಳ್ಳ ಹರಿದು ಹೋಗಿದ್ದು ಭಾರೀ ಮಳೆಯಾದಂತಹ ಸಂದರ್ಭದಲ್ಲಿ ನೀರು ನುಗ್ಗಿ, ಹಳ್ಳದ ಸುತ್ತಮುತ್ತಲಿನ ಗ್ರಾಮಗಳಿಗೆ ಹಾನಿಯಾಗುತ್ತಿದೆ. ಆದ್ದರಿಂದ ನಕಾಶೆ ಹಳ್ಳವನ್ನು ದುರಸ್ತಿಪಡಿಸಿ ಚರಂಡಿ, ಒಳಚರಂಡಿ ಹಾಗೂ ಡ್ರೈನೇಜ್ ಕಾಮಗಾರಿಗಳನ್ನು ಆರಂಭಿಸಿ ಶಾಶ್ವತ ಪರಿಹಾರ ನೀಡಲು ಒತ್ತಾಯಿಸಿದ್ದಾರೆ.

ತಾಪಂ ಮಾಜಿ ಸದಸ್ಯ ಓಂಕಾರಪ್ಪ, ಮುಖಂಡರಾದ ಅಶೋಕ್, ಶಿವಣ್ಣ ಮತ್ತಿತರರಿದ್ದರು.


## ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ **ಶ್ರೀಮತಿ ಕೆ. ವಸಂತ ಕೋಂ ಹೆಚ್.ಆರ್ ಮಂಜುನಾಥ,** ವಾಸ: ಜಾನಕಲ್ ಗ್ರಾಮ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರು ನೀಡಿದ ಮಾಹಿತಿ ಮೇರೆಗೆ ಸಾರ್ವಜನಿಕರ ಗಮನಕ್ಕೆ ತಿಳಿಸುವುದೇನೆಂದರೆ:- ನಮ್ಮ ಕಕ್ಷಿದಾರರಾದ ಶ್ರೀಮತಿ ಕೆ. ವಸಂತರವರಿಗೆ ದಾವಾ ಆಸ್ತಿಯಲ್ಲಿ ಕಾನೂನಾತ್ಮಕವಾದ ಹಕ್ಕು ಇದ್ದು ಅವರನ್ನು ಹೊರತುಪಡಿಸಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದು ಸದರಿ ಆಸ್ತಿಯ ಬಗ್ಗೆ ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ, ದಾವಣಗೆರೆಯಲ್ಲಿ ಓ.ಎಸ್.ನಂ.201/2021 ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ **ಶ್ರೀ ಬ್ರಹ್ಮಾನಂದ ರೆಡ್ಡಿ ಮತ್ತು ಶ್ರೀಮತಿ ಡಿ. ಪ್ರಭಾವತಿಯವರನ್ನು** 4 ಮತ್ತು 5ನೇ ಪ್ರತಿವಾದಿಗಳನ್ನಾಗಿ ಮಾಡಿದ್ದು, ಸದರಿ **ಶ್ರೀ ಬ್ರಹ್ಮಾನಂದ ರೆಡ್ಡಿ ಮತ್ತು ಶ್ರೀಮತಿ ಡಿ. ಪ್ರಭಾವತಿಯವರು** ಷೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು, ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿಗಾರರಿಗೆ ದಾವಾ ಆಸ್ತಿಯಲ್ಲಿ ಕಾನೂನಾತ್ಮಕವಾದ ಹಕ್ಕು ಇರುವುದರಿಂದಲೂ ಹಾಗೂ ಸದರಿ ಆಸ್ತಿಯ ಬಗ್ಗೆ ಮೇಲ್ಕಂಡ ದಾವೆಯು ಪೆಂಡಿಂಗ್ ಇರುವುದರಿಂದಲೂ ಯಾರಾದರೂ ಈ ಆಸ್ತಿಯನ್ನಾಗಲಿ ಅಥವಾ ಅದರಲ್ಲಿ ಮಾಡಲ್ಪಡುವ ಸೈಟುಗಳನ್ನಾಗಲೀ ಕೊಂಡುಕೊಂಡಲ್ಲಿ ಸದರಿ ಖರೀದಿಯು ನನ್ನ ಕಕ್ಷಿದಾರರ ಹಕ್ಕಿಗೆ ಬಾಧಿಸುವುದಿಲ್ಲ.

**ಷೆಡ್ಯೂಲ್**

ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ಶಾಮನೂರು ಗ್ರಾಮದ ಸ.ನಂ. 206/2ಎ4 ರ ವಿಸ್ತೀರ್ಣ 01 ಎಕರೆ 20 ಗುಂಟೆ ಸೊತ್ತಿಗೆ ಚಕ್ಕುಬಂದಿ:- **ಪೂರ್ವ : ಸ.ನಂ.206/2ಎ3ರ ಸೊತ್ತು ಪಶ್ಚಿಮ: ಸ.ನಂ 206/2ಎ5 ರ ಸೊತ್ತು ಉತ್ತರ: ಗಿರಿಯಜ್ಜರ ಮುನಿಯಪ್ಪನವರ ಸೊತ್ತು ದಕ್ಷಿಣ: ಕೊಂಡಜ್ಜಿ ಜಯಪ್ಪನವರ ಸೊತ್ತು**

**ವಸಂತ.ಕೆ**
ಕಕ್ಷಿದಾರರು
ಸ್ಥಳ : ದಾವಣಗೆರೆ
ದಿನಾಂಕ 24.08.2021

ಕಕ್ಷಿದಾರರ ಪರ ವಕೀಲರು
**ಹೆಚ್.ವಿ. ರಾಮದಾಸ್,** ಬಿ.ಕಾಂ, ಎಲ್.ಎಲ್.ಬಿ
ನಂ.64, ಸದ್ಗುರು, 2ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
**ಮೊ: 98860 22144**

## ದಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ಪೂನಾ-ಬೆಂಗಳೂರು ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ-2. ದೂರವಾಣಿ : 231155, 272540

**ವಾಹನ ಬಹಿರಂಗ ಹರಾಜು (ಇಸ್ತಿಹಾರ್) ಪ್ರಕಟಣೆ**

ಬ್ಯಾಂಕಿನಿಂದ ವಾಹನ ಸಾಲ ಪಡೆದು ಸುಸ್ತಿಯಾಗಿರುವ ಸಾಲಗಾರರಿಂದ ವಶಪಡಿಸಿಕೊಂಡಿರುವ ವಾಹನವು ಹೇಗಿರುತ್ತದೆಯೋ, ಹಾಗೆಯೇ ಇರುವ ಸ್ಥಿತಿಯಲ್ಲಿ ಮುಖ್ಯ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು, ವಾಹನದ ವಿವರ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ. | ಸಾಲಗಾರರ ಹೆಸರು | ಸಾಲದ ಖಾತೆ ನಂಬರ್ ಮತ್ತು ಸಾಲದ ಮೊತ್ತ | ಬ್ಯಾಂಕಿಗೆ ಆಧಾರವಾಗಿರುವ ವಾಹನದ ವಿವರ | ಹರಾಜು ನಡೆಯುವ ದಿನಾಂಕ, ಸ್ಥಳ ಮತ್ತು ಸಮಯ |
|---|---|---|---|---|
| 01) | ಶ್ರೀ ಕಲಿವೀರಾಚಾರ್ ಬಿನ್ ಕುಮಾರಸ್ವಾಮಿ ಹೆಚ್.ಕೆ., #2481/2ಎ, 9ನೇ ಮೇನ್, ಬಕ್ಕೇಶ್ವರ ಶಾಲೆಯ ಹತ್ತಿರ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ. | ವಾಹನ ಸಾಲದ ಖಾತೆ ನಂ. ವಿ.ಹೆಚ್. 886, ಪಿ.ಜೆ. ಬಡಾವಣೆ ಶಾಖೆ, ರೂ. 27355-32 (ದಿನಾಂಕ : 31.07.2021ಕ್ಕೆ ಇದ್ದಂತೆ) ಹಾಗೂ ಮುಂದುವರೆದ ಬಡ್ಡಿ ಮತ್ತು ಇತರೆ ಖರ್ಚು | ಹೀರೋ ಪ್ಯಾಷನ್ ಪ್ರೊ. ಬೈಕ್ ನಂ. ಕೆಎ17-ಹೆಚ್‌ಎ-6541 ಮಾಡೆಲ್ 2018 | ದಿನಾಂಕ : 26.08.2021 ರಂದು ಗುರುವಾರ ಮಧ್ಯಾಹ್ನ 12.00 ಘಂಟೆಗೆ, ಮುಖ್ಯ ಕಛೇರಿಯ ಆವರಣದಲ್ಲಿ |

**ಹರಾಜಿನ ಷರತ್ತುಗಳು :** ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ಹರಾಜಿನ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. 1) ಹರಾಜಿನಲ್ಲಿ ಸವಾಲ್ ಮಾಡತಕ್ಕವರು ಹರಾಜಿಗಿಂತ ಮುಂಚೆ ಹರಾಜು ಠೇವಣಿಯಾಗಿ ರೂ. 5000/- ನಗದು ಹಣವನ್ನು ಮುಂಗಡ ಠೇವಣಿಯಾಗಿ ಬ್ಯಾಂಕಿನಲ್ಲಿ ಪಾವತಿಸಬೇಕು ಹಾಗೂ ತಮ್ಮ ಇತ್ತೀಚಿನ ಗುರುತಿನ ಪತ್ರ (ಆಧಾರ್ ಕಾರ್ಡ್, ಪಾನ್ ಕಾರ್ಡ್, ಚುನಾವಣಾ ಆಯೋಗ ವಿತರಿಸಿದ ಕಾರ್ಡ್, ಇವುಗಳಲ್ಲಿ ಯಾವುದಾದರೂ ಒಂದು) ಗುರುತಿನ ಜೆರಾಕ್ಸ್ ಪ್ರತಿಯೊಂದಿಗೆ ಹರಾಜಿನಲ್ಲಿ ಭಾಗವಹಿಸತಕ್ಕದ್ದು. 2) ವಾಹನಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಬಾಕಿಗಳಿಗೆ, ಮೊಕದ್ದಮೆಗಳಿಗೆ, ಇತ್ಯಾದಿಗಳಿಗೆ, ಬ್ಯಾಂಕು ಜವಾಬ್ದಾರಿಯಲ್ಲ ಹಾಗೂ ಆರ್.ಟಿ.ಓ. ಆಫೀಸ್ ಖರ್ಚುಗಳನ್ನು ವಾಹನ ತೆಗೆದುಕೊಳ್ಳುವವರೇ ಭರಿಸತಕ್ಕದ್ದು. 3) ಅತ್ಯಧಿಕ ಸವಾಲ್ ಮಾಡಿ ವಾಹನವನ್ನು ಕೊಳ್ಳುವವರು, ಪ್ರಧಾನ ವ್ಯವಸ್ಥಾಪಕರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇ. 50 ರಷ್ಟು ಹಣವನ್ನು ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು 15 ದಿನಗಳೊಳಗೆ ಪಾವತಿ ಮಾಡಬೇಕು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. 4) ಯಾವುದೇ ಕಾರಣಗಳನ್ನು ನೀಡದೆ ಹರಾಜನ್ನು ಒಪ್ಪುವ ಮತ್ತು ತಿರಸ್ಕರಿಸುವ ಅಧಿಕಾರ ಪ್ರಧಾನ ವ್ಯವಸ್ಥಾಪಕರ ಅಧೀನಕ್ಕೆ ಒಳಪಟ್ಟಿರುತ್ತದೆ. 5) ವಾಹನವು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ, ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. 6) ವಾಹನದ ದಾಖಲಾತಿಗಳನ್ನು ನಿಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಂಡ ನಂತರ ಭೌತಿಕವಾಗಿ ವಾಹನವನ್ನು ನಿಮ್ಮ ವಶಕ್ಕೆ ಕೊಡಲಾಗುವುದು. 7) ಮೇಲ್ಕಾಣಿಸಿದ ವಾಹನವನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ನಮ್ಮ ಬ್ಯಾಂಕಿನ ಪ್ರಧಾನ ಕಛೇರಿ ವ್ಯವಸ್ಥಾಪಕರನ್ನು ಈ ಜಾಹೀರಾತಿನ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 10.00 ಘಂಟೆಯಿಂದ ಸಂಜೆ 5.00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು.

**ಕೋಗುಂಡಿ ಬಕ್ಕೇಶಪ್ಪ** ಅಧ್ಯಕ್ಷರು
**ಅಂದನೂರು ಮುಪ್ಪಣ್ಣ** ಉಪಾಧ್ಯಕ್ಷರು
**ಡಿ.ವಿ. ಆರಾಧ್ಯಮಠ್** ಪ್ರಧಾನ ವ್ಯವಸ್ಥಾಪಕರು

# ಸ್ವಾತಂತ್ರ್ಯ ಅಮೃತ ಮಹೋತ್ಸವದಲ್ಲಿ ಯೋಧರ ಕೊಡುಗೆಯ ನೆನಪು



ದಾವಣಗೆರೆ, ಆ.23- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಚಿರಂತನ ಸಾಂಸ್ಕೃತಿಕ ಸಂಸ್ಥೆಯಿಂದ ನಿನ್ನೆ ಹಮ್ಮಿಕೊಂಡಿದ್ದ 75ನೇ ಭಾರತ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಆಚರಣೆಯಲ್ಲಿ ಯೋಧರ ಜೀವನದ ಯಶೋಗಾಥೆ ನೆನಪಿಸಲಾಯಿತು.

ನಗರದ ಸದ್ಯೋಜಾತ ಶಿವಾಚಾರ್ಯ ಹಿರೇಮಠದಲ್ಲಿ ನಡೆದ ಅರ್ಥಪೂರ್ಣ ಮಹೋತ್ಸವ ಆಚರಣೆಯಲ್ಲಿ ಭಾರತೀಯ ಸೇನೆಯಲ್ಲಿ 28 ವರ್ಷ ಸೇವೆ ಸಲ್ಲಿಸಿದ ಎಲೆಬೇತೂರಿನ ನಿವೃತ್ತ ಹಿರಿಯ ಯೋಧ ಎನ್.ಎಂ. ಬಸಪ್ಪ ಅವರನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಇದೇ ವೇಳೆ ಅವರ ಭಾರತೀಯ ಸೇನೆಯ ಅನುಭವಗಳು, ಸೈನಿಕನಾಗಿ ಅವರು ಎದುರಿಸಿದ ಸವಾಲುಗಳು ಹಾಗೂ ಅವರ ಸೇನಾ ಜೀವನದ ಮರೆಯಲಾಗದ ಘಟನೆಗಳನ್ನು ಸಂದರ್ಶನದ ಮುಖಾಂತರ ಎಳೆ - ಎಳೆಯಾಗಿ ಬಿಚ್ಚಿಡಲಾಯಿತು. ಒಬ್ಬ ಯೋಧನ ಜೀವನದ ಚಿತ್ರಣ ಕಾರ್ಯಕ್ರಮವನ್ನು ವೀಕ್ಷಿಸಿದ ಎಲ್ಲರ ಕಣ್ಣು ಕಟ್ಟುವಂತೆ ಸಂದರ್ಶಕರಾದ ದೀಪ ರಾವ್ ಪ್ರಶ್ನೆಗಳನ್ನು ಕೇಳಿದರು.

ಅಲ್ಲದೇ, ದಿ. ಲೆಫ್ಟಿನೆಂಟ್ ಜನರಲ್ ಸಂದೇಶ್ ಕುಮಾರ್ ಅವರ ತಾಯಿ ಯೂ ಆಗಿರುವ ಏಜು ಏಷಿಯಾ ಸಂಸ್ಥೆಗಳ ಸಂಸ್ಥಾಪಕರಾದ ನೀಲಾ ಕುಮಾರಿ ಅವರನ್ನು ಸಹ ಸನ್ಮಾನಿಸಲಾಯಿತು.

ಹೆತ್ತ ಮಗನನ್ನು ದೇಶ ಸೇವೆಗಾಗಿ ಕಳುಹಿಸಲು ಅವರು ಹೇಗೆ ಮನಸ್ಸು ಮಾಡಿದರು, ಮಗನ ಸೇನಾ ಜೀವನದ ಚಿತ್ರಣ ಹಾಗೂ ಮುಖ್ಯವಾಗಿ ಸೇನೆಯ ಶಿಸ್ತಿನ ಜೀವನವನ್ನು ನೀಲ ಕುಮಾರಿ ಮನಮುಟ್ಟುವಂತೆ ಹೇಳಿದಾಗ, ನೆರೆದಿದ್ದವರ ಕಣ್ಣಂಚಿನಲ್ಲಿ ಆನಂದ ಭಾಷ್ಪ ವ್ಯಕ್ತವಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ರವಿಚಂದ್ರ, ಚಿರಂತನದ ಕಾರ್ಯದರ್ಶಿ ಮಾಧವ ಪ್ರಸಾದ್ ಪದಕಿ, ಎಂ.ಎಸ್.ಅಲಕಾನಂದ, ವೆಂಕಟೇಶ್ ಇದ್ದರು. ಚಿರಂತನದ ದೀಪ ನಿರೂಪಿಸಿದರು.

# ವಾಲ್ಮೀಕಿ ಜಯಂತಿಯೊಳಗೆ 7.5 ಮೀಸಲಾತಿ ಹೆಚ್ಚಳ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ರಾಜನಹಳ್ಳಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ವಿಶ್ವಾಸ



ಹರಪನಹಳ್ಳಿ, ಆ.23- ಮುಂಬರುವ ವಾಲ್ಮೀಕಿ ಜಯಂತಿಯೊಳಗೆ 7.5 ಮೀಸಲಾತಿ ಹೆಚ್ಚಳ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಮಹರ್ಷಿ ವಾಲ್ಮೀಕಿ ಪತ್ತಿನ ಸಹಕಾರಿ ಸಂಘದ ಕಛೇರಿಗೆ ಭೇಟಿ ನೀಡಿ ಶುಭ ಕೋರಿದ ಬಳಿಕ ಶ್ರೀಗಳು ಸುದ್ದಿಗಾರರೊಂದಿಗೆ ಮಾತನಾಡಿದರು.

ವಾಲ್ಮೀಕಿ ನಾಯಕ ಸಮುದಾಯಕ್ಕೆ 7.5 ಮೀಸಲಾತಿ ಸಂಬಂಧ ಇತ್ತೀಚೆಗೆ ಸಮಾಜದ ಶಾಸಕರು, ಸಂಸದರು ಹಾಗೂ ಮುಖಂಡರೊಂದಿಗೆ ನಿಯೋಗ ತೆರಳಿ ನೂತನ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದು, ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಬೊಮ್ಮಾಯಿ ಅವರು ಶೀಘ್ರದಲ್ಲೇ ಮೀಸಲಾತಿ ಹೆಚ್ಚಳ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ಬಿಜೆಪಿ ಸರ್ಕಾರ ಭರವಸೆ ನೀಡಿದಂತೆ ವಾಲ್ಮೀಕಿ ಅಭಿವೃದ್ಧಿ ಕಲ್ಯಾಣ ಇಲಾಖೆ ಘೋಷಣೆ ಮಾಡಿದ್ದು ತಮಗೆ ನೆಮ್ಮದಿ ತಂದಿದೆ. ಈಗಾಗಲೇ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಹಾಗೂ ಆರ್ಥಿಕ ನೀತಿಯನ್ನು ಜಾರಿಗೆ ತಂದಿದ್ದು, ಅದೇ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಹ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಳ ಮಾಡಬೇಕು ಎಂಬುದು ಅಖಂಡ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರ ಒತ್ತಾಯವಾಗಿದೆ ಎಂದರು.

ಅರಸೀಕೆರೆ ಬೈಪಾಸ್ ರಸ್ತೆಯಲ್ಲಿರುವ ವಾಲ್ಮೀಕಿ ಭವನದ ಕಟ್ಟಡ ಕಾಮಗಾರಿ ಪರಿಪೂರ್ಣವಾಗದೇ ನೆನೆಗುದಿಗೆ ಬಿದ್ದಿರುವ ಬಗ್ಗೆ ಸ್ಥಳೀಯ ಶಾಸಕ ಜಿ. ಕರುಣಾಕರ ರೆಡ್ಡಿ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಕಾಮಗಾರಿಯ ವಿಳಂಬದ ಬಗ್ಗೆ ವಿಚಾರಿಸಿದಾಗ ಶಾಸಕರು ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಪುರಸಭೆ ಮುಖ್ಯಾಧಿಕಾರಿ ಎರೆಗುಡಿ ಶಿವಕುಮಾರ್, ಸಮಾಜ ಕಲ್ಯಾಣಾಧಿಕಾರಿ ಆನಂದ್ ವೈ. ಡೊಳ್ಳಿನ, ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್, ಇಸಿಒ ಮಂಜುನಾಥ್ ಗಿರಜ್ಜಿ, ಸಹಕಾರ ಸಂಘದ ಅಧ್ಯಕ್ಷ ಕೆ.ಎಂ. ಪ್ರಾಣೇಶ, ಉಪಾಧ್ಯಕ್ಷ ನೀಲಗುಂದದ ಟಿ. ಮನೋಜ, ಕಾರ್ಯದರ್ಶಿ ಸೆಳ್ಳಮ್ಮಿ ದುರುಗಪ್ಪ, ನಿರ್ದೇಶಕರಾದ ರೇವಣಸಿದ್ದಪ್ಪ, ಸಿದ್ದೇಶ ಚಟ್ನಿಹಳ್ಳಿ, ಕೆಂಚಪ್ಪ ಕುಮಾರನಹಳ್ಳಿ, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ಗುತ್ತಿಗೆದಾರ ಬಾಣದ ಅಂಜಿನಪ್ಪ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ತಳವಾರ ಚಂದ್ರಪ್ಪ, ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ್, ಕಾರ್ಯದರ್ಶಿ ಶಿವರಾಜ, ಕೆಂಚಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಲೋಕಿಕೆರೆ ರಸ್ತೆ, ಇಂಡಸ್ಟ್ರಿಯಲ್ ಪ್ರದೇಶ, ಸುಬ್ರಹ್ಮಣ್ಯ ನಗರ, ರವೀಂದ್ರನಾಥ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಟಿ.ವಿ. ಸ್ಟೇಷನ್, ಜಿಲ್ಲಾ ಪಂಚಾಯತ್ ಆಫೀಸ್, ಅರಣ್ಯ ಇಲಾಖೆ, ಭೂಸೇನಾ ನಿಗಮ, ಎಸ್.ಆರ್.ಎಸ್. ವಸತಿ ಗೃಹಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಜಿಲ್ಲೆಯಲ್ಲಿ 1 ಪಾಸಿಟಿವ್

ದಾವಣಗೆರೆ, ಆ.22- ಭಾನುವಾರ ಹೊರ ಜಿಲ್ಲೆ ಯಿಂದ ಬಂದ ಒಬ್ಬರಲ್ಲಿ ಮಾತ್ರ ಸೋಂಕು ಕಾಣಿಸಿಕೊಂಡಿದೆ. 215 ಸಕ್ರಿಯ ಪ್ರಕರಣಗಳಿವೆ.

# ಸಾಮಾಜಿಕ ಕ್ರಾಂತಿಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರು



ದಾವಣಗೆರೆ, ಆ.23 - ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂಬ ತತ್ವವನ್ನು ಪ್ರತಿಪಾದಿಸಿ, ಮನುಕುಲ ಕುಟುಂಬಕ್ಕೆ ಸಾರಿ, ವಿಶ್ವ ಮಾನವ ಸಂದೇಶವನ್ನು ಕೇರಳದಿಂದ ಪ್ರಾರಂಭ ಮಾಡಿ, ದೇಶದೆಲ್ಲೆಡೆ ಪಸರಿಸಿದ ಮಹಾನ್ ಸಂತ ಬ್ರಹ್ಮಶ್ರೀ ನಾರಾಯಣ ಗುರು ಎಂದು ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸುವ ಮೂಲಕ ಆಚರಿಸಲಾಯಿತು.

ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಒತ್ತು ನೀಡುವುದರ ಮೂಲಕ ಸಮಾಜದಲ್ಲಿ ಸುಧಾರಣೆ ತರಲು ಯತ್ನಿಸಿ ಹಿಂದೂ ಧರ್ಮ, ಸಂಸ್ಕೃತಿಗಳನ್ನು ರಕ್ಷಿಸಿ ಕೆಳವರ್ಗದವರನ್ನು ಮೇಲೆತ್ತುವ ಉದ್ದೇಶದಿಂದ ಯಾರನ್ನೂ ದ್ವೇಷಿಸದೇ ಸಂಘಟನೆಯಿಂದ, ಶಿಕ್ಷಣದಿಂದ ಉದ್ದಿಮೆಗಳನ್ನು ಸ್ಥಾಪಿಸುವ ಮೂಲಕ ದೇಶದ ಉನ್ನತಿಯನ್ನು ಸಾಧಿಸೋಣ ಎಂದು ಶತಮಾನಗಳ ಹಿಂದೆ ಜನಕ್ಕೆ ಸಾರಿದವರು ನಾರಾಯಣ ಗುರು ಅವರು ಎಂದರು.

ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನದ ಬ್ರಿಟೀಷ್ ಆಳ್ವಿಕೆಯಲ್ಲಿ ಭಾರತೀಯರು ಗುಲಾಮರಾಗಿದ್ದ ಇತಿಹಾಸವಿದೆ. ಕೇರಳದ ಬಹುಸಂಖ್ಯಾತ ಈಳವ ಜನಾಂಗದವರನ್ನು ಅಸ್ಪೃಶ್ಯ ವರ್ಗವೆಂದು ಪರಿಗಣಿಸಲಾಗುತ್ತಿತ್ತು, ಹೀಗಾಗಿ ಅವರಿಗೆ ದೇವಾಲಯಗಳಿಗೆ ಪ್ರವೇಶವಿರಲಿಲ್ಲ. ಅವಿದ್ಯೆಯಿಂದಾಗಿ ಸಾಮಾಜಿಕ ಕ್ರೂರ ಶೋಷಣೆಗೆ ಒಳಗಾದ ಕೆಳವರ್ಗದವರಿಗಾಗಿ ನಾರಾಯಣ ಗುರು ಅವರು ಅರವಿಪುರಂನಲ್ಲಿ 1888 ರಲ್ಲಿ ಮೊಟ್ಟ ಮೊದಲು ಶಿವರಾತ್ರಿ ದಿನದಂದು ಶಿವಲಿಂಗ ದೇವಾಲಯ ಪ್ರತಿಷ್ಠಾಪನೆ ಮಾಡಿ ದಲಿತರಿಗೆ ಪ್ರವೇಶಿಸುವ, ಪೂಜೆ ಮಾಡುವ ವ್ಯವಸ್ಥೆ ಮಾಡಿದರು. ಕ್ರಿ.ಶ.1912 ರಲ್ಲಿ ಮಂಗಳೂರು ಸೇರಿದಂತೆ, ದಕ್ಷಿಣ ಭಾರತ ಮತ್ತು ಶ್ರೀಲಂಕಾದಲ್ಲಿ ಒಟ್ಟು 79 ದೇವಾಲಯಗಳನ್ನು ಸ್ಥಾಪಿಸುವ ಸಮಾನತೆಯ ಹೋರಾಟವು ಮುಂದೆ ಸಾಮಾಜಿಕ ಮತ್ತು ಧಾರ್ಮಿಕ ಪರಿವರ್ತನೆಗೆ ಕಾರಣವಾಯಿತು ಎಂದು ಹೇಳಿದರು.

ಗುರುಗಳು ಸದಾ ಚಲಿಸುವ ಹರಿಕಾರ. ಸಮಾಜದ ಸುತ್ತಮುತ್ತಲಿರುವ ಕಂದಾಚಾರ, ಮೂಢನಂಬಿಕೆಗಳನ್ನು ಟೀಕಿಸಿ ಸರಿಪಡಿಸುತ್ತಿದ್ದರು. ವಿಶ್ವ ಕವಿ ರವೀಂದ್ರನಾಥ ಟ್ಯಾಗೂರ್ ಕೂಡ, ಕೇರಳದ ನಾರಾಯಣ ಗುರುಗಳಿಗೆ ಸರಿಸಮಾನರಾದ ಮಹಾಪುರುಷರನ್ನು ಕಂಡಿಲ್ಲ ಎಂದು ಉದ್ಗರಿಸಿದ್ದರು ಹಾಗೂ ಗಾಂಧೀಜಿಯವರು ತಮ್ಮ ಹರಿಜನೋದ್ಧಾರಕ್ಕಾಗಿ ಸ್ಫೂರ್ತಿ ಪಡೆದದ್ದು ನಾರಾಯಣ ಗುರುಗಳಿಂದ. ಹಾಗಾಗಿ ನಾರಾಯಣ ಗುರುಗಳ ಸಾಮಾಜಿಕ ಕಾರ್ಯಕ್ರಮಗಳಿಗೂ ಮತ್ತು ಗಾಂಧೀಜಿಯವರ ಸಾಮಾಜಿಕ ಚಟುವಟಿಕೆಗಳ ಹೋಲಿಕೆಯನ್ನು ರೋಮನ್ ಕ್ಯಾಲೆಂಡರ್ ನಲ್ಲಿ ಕಾಣಬಹುದು ಎಂದು ವೀರಮಲ್ಲಪ್ಪ ಹೇಳಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಉಪಕಾರ್ಯದರ್ಶಿ ಆನಂದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಹಾಗೂ ಬ್ರಹ್ಮಶ್ರೀ ನಾರಾಯಣ ಗುರು ಸಮಾಜದ ಅಧ್ಯಕ್ಷ ಹೆಚ್. ಶಂಕರ್, ಕಾರ್ಯದರ್ಶಿ ಎ.ನಾಗರಾಜ್, ಉಪಾಧ್ಯಕ್ಷ ಶಾಂತಾ ರಾಮ್, ಸಿ.ವಿ.ರವೀಂದ್ರಬಾಬು, ಖಜಾಂಚಿ ಇ.ದೇವೇಂದ್ರಪ್ಪ, ಜಂಟಿ ಕಾರ್ಯದರ್ಶಿ ಇ.ಭರಮಪ್ಪ, ನಿರ್ದೇಶಕರಾದ ರಾಜಣ್ಣ, ಮಹಾಬಲೇಶ್, ರಾಮದಾಸ್ ಹಾಗೂ ಇತರರು ಉಪಸ್ಥಿತರಿದ್ದರು.



## ಉಕ್ಕಡಗಾತ್ರಿ ಶ್ರೀ ಅಜ್ಜಯ್ಯನ ಪುಣ್ಯಾರಾಧನೆ - ಬೆಳ್ಳಿ ರಥೋತ್ಸವ

ಮಲೇಬೆನ್ನೂರು, ಆ.23- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಬೆಳ್ಳಿ ರಥೋತ್ಸವವನ್ನು ಸರಳವಾಗಿ ನೆರವೇರಿಸಲಾಯಿತು. ಬೆಳ್ಳಿ ರಥಕ್ಕೆ ನಂದಿಗುಡಿ ಮಠದ ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು. ಗದ್ದುಗೆ ಟ್ರಸ್ಟ್ ಸಮಿತಿ ಕಾರ್ಯದರ್ಶಿ ಸುರೇಶ್, ಸದಸ್ಯರಾದ ಗದಿಗೆಯ್ಯ ಪಾಟೀಲ್, ವೀರನಗೌಡ, ಬಸವನಗೌಡ, ಆನಂದ್ ಪಾಟೀಲ್, ಗದಿಗೆಪ್ಪ ಹೊಸಳ್ಳಿ, ಪ್ರಕಾಶ್ ಇನ್ನಿತರರು ಹಾಜರಿದ್ದರು.

## ಹೆಚ್‌ಯುಐಡಿ ಕಡ್ಡಾಯಕ್ಕೆ ಚಿನ್ನ-ಬೆಳ್ಳಿ ವರ್ತಕರ ವಿರೋಧ



ಜಗಳೂರು

ಜಗಳೂರು, ಆ.23- ಬಂಗಾರ ಮತ್ತು ಬೆಳ್ಳಿ ಒಡವೆಗಳ ಮೇಲೆ ಹಾಲ್ ಮಾರ್ಕ್ ಮತ್ತು ಹೆಚ್.ಯು.ಐ.ಡಿ. ಕಡ್ಡಾಯಗೊಳಿಸಿರುವುದನ್ನು ಸ್ವಾಗತಿಸುತ್ತೇವೆ. ಆದರೆ ಪ್ರಾಯೋಗಿಕ ಸಮಸ್ಯೆಗಳಿರುವುದರಿಂದ ಹೆಚ್.ಯು.ಐ.ಡಿ ಯನ್ನು ವಿರೋಧಿಸುತ್ತೇವೆ ಎಂದು ವರ್ತಕರ ಸಂಘದ ವತಿಯಿಂದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಅಂಗಡಿಗಳನ್ನು ಸಾಂಕೇತಿಕವಾಗಿ ಬಂದ್ ಮಾಡಿದ ವರ್ತಕರು, ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರ ಈ ನಿರ್ಧಾರದಿಂದ ಹಿಂದೆ ಸರಿಯುವಂತೆ ಒತ್ತಾಯಿಸಿದರು. ಚಿನ್ನ, ಬೆಳ್ಳಿ ವರ್ತಕರು ಮತ್ತು ಕೆಲಸಗಾರರ ಸಂಘದ ಅಧ್ಯಕ್ಷ ಕೆ.ಜಿ. ಮಂಜುನಾಥ್, ಪದಾಧಿಕಾರಿಗಳಾದ ಕೆ. ಮಂಜುನಾಥ್, ಟಿ.ಹೆಚ್. ಮಹಾತ್ಮಾಚಾರಿ, ಶ್ರೀನಿವಾಸಾಚಾರಿ, ಪ್ರಕಾಶ್, ಮಹೇಶ್ ಇನ್ನಿತರರಿದ್ದರು.

## ದಲ್ಲಾಲರ ಸಂಘ, ಎ.ಪಿ.ಎಂ.ಸಿ. ವರ್ತಕರಿಂದ ಭದ್ರೆಗೆ ಬಾಗಿನ



ದಾವಣಗೆರೆ, ಆ.23 - ನಗರದ ದಲ್ಲಾಲರ ಸಂಘ ಹಾಗೂ ಎಪಿಎಂಸಿ ವರ್ತಕರ ಸಂಘದಿಂದ ಇತ್ತೀಚೆಗೆ ಭದ್ರೆಗೆ ಬಾಗಿನ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ದಲ್ಲಾಲರ ಸಂಘದ ಅಧ್ಯಕ್ಷ ಪರಮೇಶ್ವರಪ್ಪ, ಉಪಾಧ್ಯಕ್ಷ ಕಂಸಾಗರದ ಪಂಚಾಕ್ಷರಪ್ಪ, ಕುಸುಮ ಶೆಟ್ರು, ಜಾವೀದ್, ಬೇತೂರು ಮರಡಿ ರೇವಣಸಿದ್ದಪ್ಪ, ಕೆ.ಜಿ. ಪ್ರಕಾಶ್ ಕಬ್ಬೂರು, ಕೆ.ಜಿ. ಬಸವರಾಜ, ಕೆ.ಜಿ.ಎನ್. ಸುರೇಶ್, ಕಾವಲಹಳ್ಳಿ ಜಗದೀಶ್, ಬೆಳ್ಳೂಡಿ ಉಮೇಶ್, ಶಂಕರಣ್ಣ, ಷಣ್ಮುಖಪ್ಪ, ಶಿವಣ್ಣ, ಅಣಬೇರು ಜಗದೀಶ್, ಬುಳ್ಳಾಪುರ ಸಿದ್ದೇಶ್, ಬಿ.ಜಿ.ಆರ್ ಹಾಲೇಶ್ ಇನ್ನೂ ಅನೇಕರು ಉಪಸ್ಥಿತರಿದ್ದರು.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಸಭೆ

ಲಿಂ. ಪುಟ್ಟರಾಜ ಗವಾಯಿಗಳ ಪುಣ್ಯಾರಾಧನೆ ಬಗ್ಗೆ ಬಾಡ ಕ್ರಾಸ್ ಬಳಿಯ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಸಂಜೆ 4 ಕ್ಕೆ ಸಭೆ ಕರೆಯಲಾಗಿದೆ ಎಂದು ಆಶ್ರಮದ ಕಾರ್ಯದರ್ಶಿ ಎ.ಹೆಚ್.ಶಿವಮೂರ್ತಿಸ್ವಾಮಿ ತಿಳಿಸಿದ್ದಾರೆ.

# ಜಗಳೂರು : ಕೆರೆ ತುಂಬಿಸುವ ಯೋಜನೆಯಲ್ಲಿ ಭರಮಸಮುದ್ರ ಕೆರೆ ಸೇರಿಸಲು ಮನವಿ



ಜಗಳೂರು,ಆ.23- ತಾಲ್ಲೂಕಿನ 57 ಕೆರೆ ತುಂಬಿಸುವ ಯೋಜನೆಯಲ್ಲಿ ಭರಮಸಮುದ್ರ ಕೆರೆಯನ್ನು ಸೇರ್ಪಡೆಗೊಳಿಸಲು ಒತ್ತಾಯಿಸಿ ಕೆರೆ ಸಮಿತಿ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಭರಮಸಮುದ್ರ ಕೆರೆ ಸಮಿತಿ ಹಾಗೂ ಸುತ್ತಮುತ್ತಲಿನ ಜನ ಜಮಾಯಿಸಿ ತಹಶೀಲ್ದಾರ್ ಡಾ. ನಾಗವೇಣಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಲಿಖಿತ ಮನವಿ ಸಲ್ಲಿಸಿದರು.

2014-15 ನೇ ಸಾಲಿನಲ್ಲಿ 57 ಕೆರೆ ತುಂಬಿಸುವ ಯೋಜನೆಯಡಿ ಭರಮಸಮುದ್ರ ಕೆರೆ ಸೇರ್ಪಡೆಗೊಂಡಿತ್ತು. ಆದರೆ ಇದೀಗ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಯೋಜನೆಯಲ್ಲಿ ಕೆರೆಗಳ ಪಟ್ಟಿಯಲ್ಲಿ ಕೈಬಿಟ್ಟು ಹೋಗಿದೆ. ಇದರ ಸ್ಥಾನದಲ್ಲಿ ಅರಸೀಕೆರೆ ಹೋಬಳಿಯ ನಂದಿಕಂಬದ ಕೆರೆ ಸೇರ್ಪಡೆಗೊಂಡಿದೆ. ಕೂಡಲೇ ಮುಖ್ಯಮಂತ್ರಿಗಳು ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಮೂಲಕ ವರದಿ ಪಡೆದು ಭರಮಸಮುದ್ರ ಕೆರೆಯನ್ನು ಸೇರ್ಪಡೆ ಮಾಡಬೇಕು ಎಂದು ಆಗ್ರಹಿಸಿದರು.

ಕೆರೆಯ ಅಚ್ಚುಕಟ್ಟಾದ ಪ್ರದೇಶಗಳಾದ ಉದ್ಗಟ್ಟ, ಹೊಸಹಟ್ಟಿ, ಹನುಮಂತಾಪುರ, ತಿಮ್ಮಲಾಪುರ, ದೊಣ್ಣೆಹಳ್ಳಿ, ಜಗಳೂರು ಗೊಲ್ಲರಹಟ್ಟಿ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಬೇಕು. ಇಲ್ಲವಾದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಮನವಿ ಸ್ವೀಕರಿಸಿ ಪ್ರತಿಕ್ರಿಯಿಸಿದ ತಹಶೀಲ್ದಾರ್ ಡಾ. ನಾಗವೇಣಿ, ಪ್ರತಿಭಟನೆ ಒಂದೇ ಮಾರ್ಗವಲ್ಲ. ಕೂಡಲೇ ಜಿಲ್ಲಾಧಿಕಾರಿಗಳಿಗೆ ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿ ಕ್ರಮಕೈಗೊಳ್ಳಲಾಗುವುದು. ಗ್ರಾಮಸ್ಥರು ಸಹಕರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೆರೆ ಸಮಿತಿ ಗ್ರಾ.ಪಂ. ಸದಸ್ಯ ಮಾಜಿ ಚಂದ್ರಮೌಳಿ, ಗ್ರಾ.ಪಂ. ಸದಸ್ಯ ತಿಪ್ಪೇಸ್ವಾಮಿ, ಮುಖಂಡರಾದ ನಿವೃತ್ತ ಉಪನ್ಯಾಸಕ ರಾಜಣ್ಣ ಸೂರಲಿಂಗಪ್ಪ, ಶ್ಯಾಮಣ್ಣ, ಡೊಂಕಪ್ಪ ತಿಪ್ಪೇಸ್ವಾಮಿ, ಅಜ್ಜಣ್ಣ , ಖಾದರ್ ಸಾಬ್, ಬಸಣ್ಣ, ಶ್ರೀನಿವಾಸರೆಡ್ಡಿ, ಹನುಮಂತರೆಡ್ಡಿ ಇನ್ನಿತರರು ಭಾಗವಹಿಸಿದ್ದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte